ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Waekly, KOPPA-CHM. ಫೋನ್ : 114

ನೇ ವರ್ಷ 39ನೇ ಸಂಚಿಕೆ ಕೊಪ್ಪ 27-5-1990 ಭಾನುವಾರ ಬೆಲೆ ರೂ 1-00

ಕೊರ್ಡರಿಹಿತ್ಲು ಆಸ್ಪತ್ರೆ ಕೆ.ಎಂ.ಸಿ. ವಶಕ್ಕೆ

ಕೊಪ್ಪ : ಇಲ್ಲಿಗೆ ಸಮೀಪದ ಕೊರ್ಡ ಹಿತ್ಲಿನ ಎ. ಎಲ್. ಎನ್ ರಾವ್ ಮೆಮೋರಿಯಲ್ ಧರ್ಮಾರ್ಥ ಆಸ್ಪತ್ರೆ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಆಡಳಿತಕ್ಕೆ ಒಳಪಡಲಿದೆ ಈ ವಿಚಾರವನ್ನು ಕೆ ಎಂ. ಸಿ. ಯ ವೈದ್ಯಕೀಯ ಆಡಳಿತಾಧಿಕಾರಿ ಡಾ|| ಆರ್.ಕೆ ರಕ್ಷಿತ್ ಈಚೆಗೆ ತಿಳಿಸಿದ್ದಾರೆ.

ಈಗ ಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಇಲ್ಲದಿರುವ ವೈದ್ಯಕೀಯ ವಿಭಾಗಗಳನ್ನು ಇಲ್ಲಿ ಆರಂಭಿಸಿ, ಈ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸುವುದಲ್ಲದೆ, ಒಂದು ಪ್ರತ್ಯೇಕ ಆಯುರ್ವೇದ ವಿಭಾಗ ಹಾಗೂ ಆಯುರ್ವೇದ ವಾರ್ಡ್‌ಗಳನ್ನೂ ತೆರೆದು ಕೊಪ್ಪದ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳಿಗೆ ಸೌಕರ್ಯ ಒದಗಿಸುವ ಯೋಜನೆಯಿದೆ ಎಂದೂ ತಿಳಿದು ಬಂದಿದೆ.

ಮಂಡಲಗಳಿಗೆ ತಲಾ ಇಬ್ಬರ ನಾಮಕರಣ ಅಂಗೀಕೃತ

ಕೊಪ್ಪ : ಮಂಡಲ ಪಂಚಾಯಿತಿಗಳಿಗೆ ಆಡಳಿತ ಪಕ್ಷದ ವತಿಯಿಂದ ಸೂಚಿಸಲಾಗಿದ್ದ ತಲಾ ಇಬ್ಬರ ನಾಮಕರಣವನ್ನು ಜಿ. ಪರಿಷತ್ತು ವಿರೋಧಿ ಸದಸ್ಯರ ಆಕ್ಷೇಪಣೆಯ ನಡುವೆ ಅನುಮೋದಿಸಿದೆ.

ಶೃಂಗೇರಿಗೆ ಶಿವಶಂಕರ್, ಶ್ರೀನಿವಾಸ್, ನ. ರಾ. ಪುರಕ್ಕೆ ಎಂ. ಪಿ. ಜಗತ್ಪಾಲಶೆಟ್ಟಿ, ಸುಬ್ರಮಣಿ ನಾಮಕರಣಗೊಂಡಿದ್ದಾರೆ.

ಕೊಪ್ಪಕ್ಕೆ ಅಮೃತರಾವ್ ಅಂಗಡಿಯಲ್ಲಿ ಹೊಲಿಗೆ ವೃತ್ತಿ ಮಾಡುತ್ತಿರುವ ರಾಮ (ಕುಂಬಾರ) ಹಾಗೂ ಬಸ್‌ಸ್ಟ್ಯಾಂಡ್ ಎದುರಿನಲ್ಲಿರುವ ದರ್ಜಿ ಕೃಷ್ಣಮೂರ್ತಿ ನಾಮಕರಣಗೊಂಡಿರುವ ಸದಸ್ಯರು.

ಟ್ರಾಕ್ಟರ್ ಮಗುಚಿ ಪೆಟ್ಟು

ಕೊಪ್ಪ : ಇಲ್ಲಿಗೆ ಸಮೀಪದ ದೇವನ್ ಎಸ್ಟೇಟ್‌ನಲ್ಲಿ ಮೇ 24 ರಂದು ಟ್ರಾಕ್ಟರ್ ಅಪಘಾತದಲ್ಲಿ 4 ಜನರಿಗೆ ಪೆಟ್ಟಾಗಿದ್ದು, ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಗಿದೆಯೆಂದು ತಿಳಿದು ಬಂದಿದೆ.

ಶೃಂಗೇರಿ ಮಠದ ಹೊಸ ಸೇತುವೆ ಉದ್ಘಾಟನೆ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಂದ ಶೃಂಗೇರಿಗೆ ಐದು ...ಂಗಳಲ್ಲಿ 3ನೇ ಭೇಟಿ ಈ ಬಾರಿ ಮಠದವರ ಸೇತುವೆಯ ಪ್ರಾರಂಭೋತ್ಸವ ...ಕ್ಕಾಗಿ. ಮೇ 21ರಂದು ಅವರ ಸಮ್ಮುಖದಲ್ಲಿ ಭಾರತೀತೀರ್ಥ ಸ್ವಾಮಿಗಳು ...ವಿದ್ಯಾತೀರ್ಥ' ಸೇತುವೆಯನ್ನು ಉದ್ಘಾಟಿಸಿದರು

...ಮುಖ್ಯ ಅತಿಥಿ ಪಾಟೀಲ್ ತನ್ನ ರಾಜ...ಯ ಜೀವನದಲ್ಲಿ ನಾಲ್ಕಾರು ಬಾರಿ ಈ ...ಕ್ಷೇತ್ರಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿ, ...ನ್ನದೇ ರೀತಿಯಲ್ಲಿ ಕ್ಷೇತ್ರದ ಮಹಿಮೆ...ಯನ್ನು ಸಾರಿದರು. ಈ ಸೇತುವೆಗೆ ಖರ್ಚಾದ 42 ಲಕ್ಷ ರೂ ಸರ್ಕಾರಕ್ಕೆ ಏನೂ ಅ...ದ ವೆಚ್ಚ ಸ್ವಾಮಿಗಳು ತನ್ನಂಥ ರಾಜಕಾರಣಿಯನ್ನು ಕೇಳಿದ್ದರೆ 'ತಥಾಸ್ತು' ಎನ್ನುತ್ತಿದ್ದೆ ಆದರೆ, ಬಡವರ ಕಂದಾಯದ ಹಣವಾದ ಸರ್ಕಾರದ ದುಡ್ಡನ್ನು ಸ್ವಾಮಿಗಳು ಅಪೇಕ್ಷಿಸಲಿಲ್ಲ ಎಂದರು

ಸ್ವಾಮೀಜಿ ಮಾತನಾಡಿ, ತನ್ನ ಗುರುವಿನ ಮಹೋದ್ದೇಶವಾದ ಈ ಸೇತುವೆಗೆ ಅವರ ಹೆಸರನ್ನೇ ಸೂಚಿಸಿದ್ದಾಗಿ ಹೇಳಿದರು ಸ್ವಜನಪಕ್ಷಪಾತಿಗಳಲ್ಲದ ಅವರು ಯಾವುದೇ ಕೆಲಸವನ್ನು ಸಾರ್ವಜನಿಕರಿಗಾಗಿ ಮಾಡಿದವರು. ಅವರು ಸಂಸ್ಕೃತ ಪಾಠಶಾಲೆಯ ಪಂಡಿತರಿಗೆ ಸನ್ಮಾನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು ಎಂದರು. ವೀರೇಂದ್ರ ಪಾಟೀಲರನ್ನು "ನುಡಿದಂತೆ ನಡೆಯುವ ರಾಜಕಾರಣಿ" ಎಂದು ಮೆಚ್ಚಿದರು.

ಸೇತುವೆ ನಿರ್ಮಾತೃ ಸಂಸ್ಥೆಯಾದ ಗ್ಯಾಮನ್ ಇಂಡಿಯಾ ಲಿ. ಕಂಪೆನಿಯ ಸುಬ್ಬರಾವ್, ಮಧ್ಯದಲ್ಲೆಲ್ಲೂ ಕೊಂಡಿಗಳಿಲ್ಲದ ಈ ಸೇತುವೆ ಭಾರತದಲ್ಲೇ ವಿಶಿಷ್ಟ ಮಾದರಿಯದೆಂದೂ, ಇದನ್ನು ತಮ್ಮ ಸಂಸ್ಥೆ ಲಾಭರಹಿತವಾಗಿ ನಿರ್ಮಿಸಿಕೊಟ್ಟಿದೆ ಎಂದೂ ತಿಳಿಸಿದರು.

ಮಠದ ಆಡಳಿತಾಧಿಕಾರಿ ಗೌರಿಶಂಕರ್ ಕಾರ್ಯಕ್ರಮ ನಿರ್ವಹಿಸಿದರು. ಕೊನೆಯಲ್ಲಿ ವೀರೇಂದ್ರ ಪಾಟೀಲ್, ಡಾ|| ರಾಜು ಮತ್ತು ಯು. ಕೆ. ಶಾಮಣ್ಣರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. (ಆದರೆ ಸಂಸತ್ ಸದಸ್ಯ ಡಿ.ಎಂ. ಪುಟ್ಟೇಗೌಡರನ್ನು ಬಿಟ್ಟಿದ್ದು ಯಾಕೋ ಗೊತ್ತಾಗಲಿಲ್ಲ.)

"ತಹಸೀಲ್ದಾರ್ ಹೆಸರಲ್ಲಿ ಹಣ ನೀಡಬೇಡಿ"

...ಕೊಪ್ಪ : ಸಾರ್ವಜನಿಕರ ಕೆಲಸಕ್ಕಾಗಿ ...ರೆವಿನ್ಯೂ ಇನ್‌ಸ್ಪೆಕ್ಟರ್, ಗ್ರಾಮ ಲೆಕ್ಕಿ... ಅಥವಾ ಯಾರೇ ಸಿಬ್ಬಂದಿ ವರ್ಗದ... "ತಹಸೀಲ್ದಾರರಿಗೆ ಕೊಡಬೇಕಾ..." ಎಂದು ಹಣ ಕೇಳಿದಲ್ಲಿ ಸಾರ್ವಜನಿ... ನೀಡಬಾರದೆಂದೂ, ಸರ್ಕಾರಿ ಕೆಲ... ಅಧಿಕೃತ (ರಸೀದಿ ಸಹಿತ) ಶುಲ್ಕ ಹೊರತಾಗಿ ಬೇರೆ ದೇಣಿಗೆ ನೀಡ...ಬೇಕಾಗಿಲ್ಲವೆಂದೂ ಹಾಗೊಂದು ವೇಳೆ ...ಯಾರಾದರೂ ನೀಡಿದರೆ ಅದಕ್ಕೆ ಅವರೇ ...ಹೊಣೆಯೆಂದೂ ಇಲ್ಲಿನ ತಹಸೀಲ್ದಾರ್ ...ಎಸ್. ನಾಯಕ್ ಸಾರ್ವಜನಿಕರಿಗೆ ...ಸ್ಪಷ್ಟಪಡಿಸಿದ್ದಾರೆ.

...ಬಂಗಾರದ ವಸ್ತು ಸಿಕ್ಕಿದೆ

...ಕೊಪ್ಪ : 2 ಗ್ರಾಂ ತೂಕದ, ಬಂಗಾ...ರದ ...ಪುಟ್ಟ ವಸ್ತುವೊಂದು 25.5.90 ರ... ಕೊಪ್ಪ-ಕಮ್ಮರಡಿ ಬಸ್ಸಿನಲ್ಲಿ ದೊರೆ... ಕಳೆದುಕೊಂಡವರು ಆದರ ಗುರುತು ... ಕಂಡಕ್ಟರ್ ತಮ್ಮಣ್ಣ ಅವರಿಂದ ...ದ ಕೊಳ್ಳಬಹುದು.

ಮಾಗುಂಡಿ ಬಳಿ ಬೃಹತ್ ಪ್ರಮಾಣದ ಗಂಧ ವಶ

ಒಂದು ವಿದೇಶಿ ಕಾರು, ಒಂದು ಅಂಬಾಸೆಡರ್, ಒಂದು ಜೀಪು ಅಮಾನತು

ಬಾಳೆಹೊನ್ನೂರು: ಮಾಗುಂಡಿಗೆ ಸಮೀಪದ ಹುಯಿಗೆರೆಯ ಬಳಿ ಮೇ 17ರಂದು ಹಾಡು ಹಗಲೇ ಕಳ್ಳ ಸಾಗಣೆಗೆ ಯತ್ನಿಸಲಾಗುತ್ತಿದ್ದ ಸುಮಾರು 2 ಲಕ್ಷ ರೂ. ಬೆಲೆಯ 1830 ಕಿಲೊ ಗಂಧವನ್ನು ಇಲ್ಲಿನ ವಲಯ ಅರಣ್ಯಾಧಿಕಾರಿ ಧರ್ಮಪಾಲ್ ಮತ್ತು ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಟಿಡಿಎಸ್ 4905 ನಂಬರಿನ ವಿದೇಶಿ ಕಾರು, ಎಂವೈಸಿ 2685 ಅಂಬಾಸೆಡರ್ ಮತ್ತು ಎಂವೈಸಿ 9735ರ ಜೀಪ್ -- ಇವುಗಳೊಂದಿಗೆ ಸಾಕಷ್ಟು ಶಸ್ತ್ರ ಸಜ್ಜಿತವಾದ 15-20 ಮಂದಿಯ ತಂಡ ಈ ಕಳ್ಳ ಸಾಗಣೆಯಲ್ಲಿ ತೊಡಗಿತ್ತು.

ಈ ಕಳ್ಳ ಸಾಗಣೆಯ ಸುಳಿವು ಪಡೆದ ಸಿಬ್ಬಂದಿಗಳು 2 ತಂಡವಾಗಿ 2 ಖಾಸಗಿ ಕಾರುಗಳಲ್ಲಿ ಅವಂತಿ ಮತ್ತು ಎಲೆಕಲ್ ಕಡೆಗಳಿಂದ ಶೋಧಿಸುತ್ತಾ ಬಂದಾಗ ಹುಯಿಗೆರೆ ಬಳಿ ಕಳ್ಳರ ತಂಡ ಪತ್ತೆಯಾಯಿತು. ಆದರೆ ಶಸ್ತ್ರಸನ್ನದ್ಧರಾಗಿ, ಬಹು ಸಂಖ್ಯೆಯಲ್ಲಿದ್ದ ಆರೋಪಿಗಳನ್ನು ಬಂಧಿಸುವ ವ್ಯರ್ಥ ಸಾಹಸಕ್ಕಿಳಿಯದ ಅರಣ್ಯ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿದಾಗ ಆರೋಪಿಗಳು ಪರಾರಿಯಾದರು. ಆ ಪೈಕಿ ಒಬ್ಬನಿಗೆ ತೀವ್ರವಾಗಿ ಪೆಟ್ಟು ಬಿದ್ದಿರುವ ಶಂಕೆಯಿದೆ.

ಧರ್ಮಪಾಲ್ ಜೊತೆಗೆ ಫಾರೆಸ್ಟರ್‌ಗಳಾದ ಬಿ. ಆರ್. ಗೋಪಾಲ್, ಎಂ. ತಿಮ್ಮಯ್ಯ, ಗೋವಿಂದರಾಜ್, ಮುಕುಂದಯ್ಯ, ಗಾರ್ಡ್‌ಗಳಾದ ಗುಂಡಪ್ಪ, ಕಲ್ಲೇಗೌಡ, ತ್ರಿವಿಕ್ರಮ, ಲಾರೆನ್ಸ್ ಡಿ'ಸೋಜ, ಕೃಷ್ಣಮೂರ್ತಿ, ತಿಮ್ಮಾನಾಯ್ಕ ಹಾಗೂ ವಾಚರ್ ಮಂಜುನಾಥ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮತ್ತಷ್ಟು ವರದಕ್ಷಿಣೆಗಾಗಿ 'ಬ್ಲಾಕ್ ಮೇಲ್' ಯತ್ನ :

ವರ ಮತ್ತು ಆತನ ತಂದೆಗೆ ಹಣದ ಬದಲು ಕಂಬಿ ಎಣಿಕೆ !

ಚಿಕ್ಕಮಗಳೂರು : ವರ ಕೇಳಿದ್ದಷ್ಟು ಹಣ, ಚಿನ್ನಾಭರಣಗಳನ್ನು ಕೊಡಲೊಪ್ಪಿದ್ದರೂ, ಮತ್ತಷ್ಟು ಹಣದಾಸೆಗಾಗಿ, ನಿಶ್ಚಿತವಾದ ಮದುವೆಯನ್ನು ಮುರಿಯುವುದಾಗಿ 'ಬ್ಲಾಕ್‌ಮೇಲ್' ಮಾಡಲೆತ್ನಿಸಿದ 'ವರ' ಮತ್ತು ಆತನ ತಂದೆ ಪೋಲೀಸರ ಆತಿಥ್ಯದಲ್ಲಿ ಹಣದ ಬದಲು ಕಂಬಿ ಎಣಿಸುತ್ತಿದ್ದಾರೆಂದು ವರದಿಯಾಗಿದೆ.

ಕೊಪ್ಪದ ಮಹಾನುಭಾವ

ಈ ಮಹಾನುಭಾವ 'ವರ' ಕೊಪ್ಪದ ವೆಲೇರಿಯನ್ ಡಾಲ್ಫಿನ್ ಬ್ರಿಟೊ. ಈತನ ತಂದೆ ಸೆಬಾಸ್ಟಿಯನ್ ಬ್ರಿಟೊ. ಚಿಕ್ಕಮಗಳೂರು ಸಮೀಪ ರಾಮನಹಳ್ಳಿಯಲ್ಲಿರುವ ಶಾಲಾ ಶಿಕ್ಷಕಿಯೊಬ್ಬರೊಡನೆ ಹೇಳಿದಷ್ಟು ಹಣ, ಚಿನ್ನಾಭರಣಗಳ ಮೇಲೆ ನಿಶ್ಚಿತಾರ್ಥ ನಡೆದು, ಲಗ್ನ ಪತ್ರಿಕೆಯನ್ನೂ ಹಂಚಲಾಗಿತ್ತು. ಮದುವೆ ಮೇ 17ರಂದು ನಡೆಯಬೇಕಿತ್ತು.

ಆದರೆ ಇದ್ದಕ್ಕಿದ್ದಂತೆ ಒಂದು ದಿನ ಹುಡುಗಿಯ ಮನೆಗೆ ಬಂದ ಈ ವರ ಮಹಾಶಯ, ತಾನು ಕಾರುಕೊಂಡಿದ್ದು, ಅದರ ಸಾಲ ಸ್ವಲ್ಪ ತೀರಿಸಬೇಕಿರುವುದರಿಂದ 30 ಸಾವಿರ ರೂ. ಬೇಕೆಂದು ಹುಡುಗಿಯನ್ನು ಕೇಳಿದ ಎನ್ನಲಾಗಿದೆ.

ಅಷ್ಟು ಹಣ ಕೊಡಲು ತನ್ನಿಂದ ಈಗ ಸಾಧ್ಯವಿಲ್ಲವೆಂದು ಹುಡುಗಿ ಹೇಳಿದ್ದಕ್ಕೆ ವಾಪಸು ಊರಿಗೆ ಹೋದ ವರ "ಮದುವೆ ನಿಲ್ಲಿಸುವಂತೆ" ಟೆಲಿಗ್ರಾಂ ಮಾಡಿದಾಗ ದಿಗ್‌ಭ್ರಮೆಗೊಂಡ ಹೆಣ್ಣಿನ ಕಡೆಯವರು ಸ್ಥಳೀಯ ಪಾದ್ರಿಯವರ ಮೂಲಕ ಮನ ಒಲಿಸಲೆತ್ನಿಸಿದರೂ ಫಲ ನೀಡಲಿಲ್ಲ.

ಆನಂತರ ಬಸವನಹಳ್ಳಿ ಠಾಣಾಧಿ[ಕಾರಿ] ಕೃಷ್ಣಮೂರ್ತಿಯವರಲ್ಲಿ ದೂರು [ನೀಡ]ಲಾಗಿ, ಅವರು ಭಾವೀ 'ಶಾಪ'ವಾಗಲಿ[ದ್ದ] ಈ 'ವರ'ನನ್ನೂ ಅವನ ತಂದೆಯನ್ನೂ ಬಂಧಿಸಿ, ತರೀಕೆರೆ ನ್ಯಾಯಾಲಯದ ಮು[ಖ]ಲಕ ಕಾನೂನು ಕ್ರಮ ಜರುಗಿಸಿರುವುದಾಗಿ ವರದಿಯಾಗಿದೆ.

'ಹುಡುಗಿ ಅಷ್ಟೇನೂ ಸುಂದರಿಯಲ್ಲ[ದ್ದ]ರಿಂದ' ಈತನಿಗೆ ಆಕೆ ಅಷ್ಟೇನೂ ಇಷ್ಟ[ವಿ]ಲ್ಲವೆಂದೂ, ಆಕೆ ಕೈತುಂಬ ಸಂಬಳ ತ[ರು]ವವಳಾಗಿರುವುದಲ್ಲದೆ, ವರದಕ್ಷಿಣೆ ಬಾಬ[ತ್ತು] ಕೂಡ ಸಾಕಷ್ಟು ದಕ್ಕಿದ್ದರಿಂದ ಮದುವೆ[ಗೆ] ಒಪ್ಪಿದ್ದನೆಂದೂ ಕೊಪ್ಪದಲ್ಲಿ ವರನ ಕಡೆ[ಯ] ಮೂಲಗಳಿಂದ ತಿಳಿದುಬಂದಿದೆ ('ಜನಮಿತ್ರ

ಅಂತರ ಜಾತಿ ವಿವಾಹಕ್ಕೆ ಪ್ರೋತ್ಸಾಹ ಧನ

ಚಿಕ್ಕಮಗಳೂರು : ಕಡೂರು ತಾಲ್ಲೂಕಿನ ಅಗ್ರಹಾರ ಗ್ರಾಮದ ತಿಮ್ಮಣ್ಣ, ಚಿಕ್ಕಮಗಳೂರು ತಾಲ್ಲೂಕಿನ ಕರ್ತಿಕೆರೆ ಗ್ರಾಮದ ಕೆ. ಎಸ್. ರಾಜಶೇಖರ್, ಗಡಬನಹಳ್ಳಿಯ ದೇವಯ್ಯ ಮತ್ತು ಹಿರೇಗೌಜ ಗ್ರಾಮದ ಕಾಂತರಾಜ್-ಈ ಯುವಕರು ಅಂತರ ಜಾತಿ ವಿವಾಹ ಮಾಡಿಕೊಂಡಿದ್ದಕ್ಕಾಗಿ ಅಂತರ ಜಾತಿ ವಿವಾಹ ಪ್ರೋತ್ಸಾಹ ಯೋಜನೆಯನ್ವಯ ತಲಾ ೫೦೦೦ ರೂ.ಗಳ ಪ್ರೋತ್ಸಾಹ ಧನ ನೀಡಿ, ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ಈ ದಂಪತಿಗಳನ್ನು ಇತ್ತೀಚೆಗೆ ನಗರದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸತ್ಕರಿಸಿತು.

ಈ ಪ್ರೋತ್ಸಾಹ ಧನ ದೊರೆಯಲು ದಂಪತಿಗಳಲ್ಲೊಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.

ತೆಂಗಿನಮನೆ ಕ್ರೀಡಾಂಗಣ ಉಳಿಸಿಕೊಳ್ಳಲು ಕ್ರೀಡಾಪ್ರೇಮಿಗಳಿಗೆ ಕ[ರೆ]

ಕೊಪ್ಪ : ತೆಂಗಿನಮನೆಯಲ್ಲಿ ದಿ|| ಎ. ಜೆ. ಕುಲಾಸೋ ನೆನಪಿನಲ್ಲಿ ಕಳಸಾಪುರ ಎಸ್ಟೇಟ್‌ನ ಜೆ. ಎಸ್. ಕುಲಾಸೊ ಕುಟುಂಬದವರು ನಿರ್ಮಿಸಿರುವ ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್‌ನ ಕ್ರೀಡಾಂಗಣವನ್ನು ಕ್ರೀಡಾಂಗಣವಾಗಿಯೇ ಉಳಿಸಿಕೊಳ್ಳಬೇಕೆಂದು 'ಮುಂಜಾವು' ಸಂಪಾದಕ ಸಿರಿಮನೆ ನಾಗರಾಜ್ ಆಗ್ರಹಪಡಿಸಿದ್ದಾರೆ.

ಇಲ್ಲಿನ ಸನ್‌ಶೈನ್ ಕ್ರಿಕೆಟ್ ಕ್ಲಬ್ ಏರ್ಪಡಿಸಿದ್ದ 2ನೇ ವರ್ಷದ ಅಂತರ ತಾ|| ಮಟ್ಟದ ಆಹ್ವಾನಿತ ಟೆನಿಸ್‌ಬಾಲ್ ಟೂರ್ನಿ ಉದ್ಘಾಟಿಸಿ ಮಾತನಾಡಿದ ಅವರು, ಈ ಕ್ರೀಡಾಂಗಣ ನಿರ್ಮಾಣದಂಥ ದೊಡ್ಡದೊಂದು ಸಹೃದಯ ಸೇವಾ ಕಾರ್ಯ ವಿನಾಕಾರಣ ರಾಜಕೀಯ ವಿವಾದದ ಸುಳಿಗೆ ಸಿಕ್ಕಿರುವುದರಿಂದ ಕ್ರೀಡಾ ಪಟುಗಳು ಮತ್ತು ಕ್ರೀಡಾಪ್ರೇಮಿಗಳಿಗೇ ನಷ್ಟವಾಗಿದೆ ಎಂದರು.

"ಕ್ರೀಡಾಂಗಣ ಇರಲಿ. ಆದರೆ ಅದು ಮಂಡಲ ಪಂಚಾಯ್ತಿಯ ವಶದಲ್ಲಿರಲಿ ಕ್ರೀಡಾ ಸಂಘವೊಂದರ ಹೆಸರಲ್ಲಿದ್ದರೆ ಅಲ್ಲಿ ಕ್ಷುಲ್ಲಕ ರಾಜಕೀಯ ಶುರುವಾಗಬಹುದು ಅಥವಾ ಕ್ರೀಡಾ ಸಂಘವೇ ನಿಂತು ಹೋಗಬಹುದು" ಎಂಬ ವಾದವಿದೆ. ಆದರೆ ಮಂಡಲ ಪಂಚಾಯ್ತಿಯೇ ರಾಜಕೀಯಕ್ಕೆ ಕಾರಣವಾಗಬಹುದು ಹೊರತು, ಲಯನ್ಸ್, ರೋಟರಿ ಮುಂತಾದ ಸಂಸ್ಥೆಗಳಂತೆ ಕ್ರೀಡಾ ಸಂಘ ಕೂಡ ರಾಜಕೀಯ ರಹಿತವಾಗಿರಲು ಸಾಧ್ಯವಿದೆ. ಅದು ನಿಂತು ಹೋಗದಂತೆ ಎಲ್ಲ ಹಿರಿಯರೂ ಅದಕ್ಕೆ ಪೋಷಕರಾಗಬಹುದು. ಅಂತೂ ದಾನಿಗಳ ಮನಸ್ಸಿಗೆ ಈ ರೀತಿ ನೋವು, ಅಪಮಾನ ಉಂಟು ಮಾಡಿದರೆ ಮುಂದೆ ಇಂಥ ಕೊಡುಗೈಗಳು ನಮಗೆ ಎಂದೆಂದಿಗೂ ಇಲ್ಲವಾದಾರು ಎಂದು ಅವರು ಎಚ್ಚರಿಸಿದರು.

ಆದ್ದರಿಂದ ಕೊಪ್ಪದ ಎಲ್ಲಾ ಕ್ರೀ[ಡಾ] ತಂಡಗಳವರು ಒಟ್ಟಾಗಿ, ಹಿರಿಯರ ಹತ್ತಿ[ರ] "ನಿಷ್ಕಲ್ಮಷ ಮನಸ್ಸಿನಿಂದ ಈ ಕ್ರೀಡಾಂ[ಗ]ಣವನ್ನು ಅದರ ನಿರ್ಮಾತೃ ಕ್ರೀ[ಡಾ] ಸಂಘಕ್ಕೆ ಬಿಟ್ಟು ಕೊಡಲು" ಕೇಳಿ ಎಂದರು. ಖಂಡನೆ, ಪ್ರತಿಭಟನೆ ಬೇಕಿಲ್ಲ ಬದಲಿ[ಗೆ] ಮಕ್ಕಳು ಮನೆಯಲ್ಲಿ ಹಿರಿಯರೊಡ[ನೆ] ತಮಗೆ ಬೇಕಾದ್ದನ್ನು ಹಟ ಮಾಡಿ ಪಡೆ[ದು]ಕೊಳ್ಳುವಂತೆ ಇಲ್ಲೂ ಹಿರಿಯರು ಮತ್ತು ಮುಖಂಡರೊಡನೆ ಹಟ ಮಾಡಿ ಉಳಿ[ಸಿ]ಕೊಳ್ಳಿ—ಎಂದು ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಎಫ್. ಸಿ. [...] ಅಧ್ಯಕ್ಷೆ ಪ್ರೇಮಾ ಶೆಟ್ಟಿ ಕೊಪ್ಪದ[ಲ್ಲಿ] ಕ್ರೀಡಾ ಚಟುವಟಿಕೆಗಳಿಗೆ ತುಂಬು ಪ್ರೋ[ತ್ಸಾಹ] ದೊರೆಯುತ್ತಿರುವುದಕ್ಕೆ ಸಂ[ತಸ] ವ್ಯಕ್ತಪಡಿಸಿದರು. ಕಾನ್ವೆಂಟ್ ಹಿಂಭಾ[ಗ]ದ ವಿಶಾಲ ಪ್ರದೇಶ ಕ್ರೀಡಾಂಗ[ಣ]ಕ್ಕೆಂದು ಸರ್ಕಾರದಿಂದ ಮಂಜೂರಾಗಿ[ದ್ದು] ಸಂಬಂಧಪಟ್ಟ ಇಲಾಖೆಗಳವರು ಈ ಬ[ಗ್ಗೆ] ಮುಂದಿನ ಕೆಲಸಗಳನ್ನು ತ್ವರಿತಗೊ[ಳಿಸ]ಬೇಕೆಂದು ಅವರು ಒತ್ತಾಯಿಸಿದರು.

ನಿಮ್ಮ ಗ್ರಹಗತಿ — 'ಸಗಟು ಭವಿಷ್ಯ'

[**ವಿಶೇಷ ಸೂಚನೆ** : ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಭವಿಷ್ಯ ಬರೆಯಲು ಸ್ಥಳಾವಕಾಶವಿಲ್ಲದ ಕಾರಣದಿಂದ ಜನವರಿ 1 ರಿಂದ ಡಿಸೆಂಬರ್ 31 ರವರೆಗೆ ಹುಟ್ಟಿದವರಿಗೆ, ಸೋಮವಾರದಿಂದ ಶನಿವಾರದವರೆಗೆ ಹುಟ್ಟಿದವರಿಗೆ ವರ್ಷ ಭವಿಷ್ಯ, ವಾರದ ಭವಿಷ್ಯ, ದಿನ ಭವಿಷ್ಯ ಮತ್ತು ಮೊದಲನೆಯ ರಾಶಿಯಿಂದ ಕೊನೆಯ ರಾಶಿಯವರೆಗೆ ಹುಟ್ಟಿದವರಿಗೆ ಒಟ್ಟಿಗೇ ರಾಶಿ ಭವಿಷ್ಯ ಇಲ್ಲಿದೆ. ಬೇಕಾದವರು ಬೇಕಾದ್ದನ್ನು ಆರಿಸಿಕೊಳ್ಳಬಹುದು. ಆಯ್ಕೆಯಲ್ಲಿ ನೀವು ಸಂಪೂರ್ಣ ಸ್ವತಂತ್ರರು.]

ಊಟ ಮಾಡಿದರೆ ಬದುಕಬಹುದು, ಆರೋಗ್ಯ ಸರಿ ಇಲ್ಲದಿದ್ದರೆ ವೈದ್ಯರನ್ನು ನೋಡಿ. ಹೆಂಡತಿಗೆ ಜ್ವರ ಬಂದರೆ ಗಂಡನಿಗೆ ಅಡುಗೆಯ ಕೆಲಸ, ಇಲ್ಲವೇ ಮಕ್ಕಳಿಗೆ. ಶ್ರೀಮತಿಯಲ್ಲಿ ಅನುರಾಗ ಇಲ್ಲವೇ ದ್ವೇಷ, ಮಕ್ಕಳಲ್ಲಿ ವಾತ್ಸಲ್ಯ, ಹಿರಿಯರಲ್ಲಿ ಭಯಭಕ್ತಿ, ಪ್ರೀತಿ. ಇಲ್ಲವೇ ತಿರಸ್ಕಾರ, ಅದೂ ಇಲ್ಲವಾದರೆ ಕರುಣೆ

ಬಾಯಾರಿಕೆಯಾದರೆ ನೀರು ಕುಡಿಯಿರಿ, ಅವಕಾಶಗಳು ಬಂದಾಗ ಉಪಯೋಗಿಸಿಕೊಳ್ಳಿ. ಈ ವರ್ಷ ಎಲ್ಲಾ ದೃಷ್ಟಿಯಿಂದಲೂ ಅನುಕೂಲ ಇಲ್ಲವೇ ಅನಾನುಕೂಲ ಅಥವಾ ಅರೆ ಅನುಕೂಲ. ಸುಖ ದುಃಖಗಳು ಒಟ್ಟಾಗಿಯೇ ಬರುತ್ತವೆ. ದುಃಖ ಬಂದರೆ ಧೈರ್ಯಗೆಡಬೇಡಿ. ಸುಖ ಬಂದೇ ಬರುತ್ತದೆ. ಬದುಕಿನಲ್ಲಿ ತೀರಾ ಬೇಸರ ಬಂದಾಗ ಹೊಳೆ ಹಾರುತ್ತೀರಿ. ಇಲ್ಲವೇ ವಿಷ ಕುಡಿಯುತ್ತೀರಿ. ಯಾವುದೇ ಮಾರ್ಗದಿಂದಲಾದರೂ ಆತ್ಮಹತ್ಯೆ ಖಂಡಿತ.

ಕಳ್ಳತನದಿಂದ ಲಾಭ ವ್ಯಾಪಾರದಲ್ಲಿ ಲಾಭ ಇಲ್ಲವೇ ನಷ್ಟ ಈ ವರ್ಷ ಬೇಸಿಗೆಯಲ್ಲಿ ತೀವ್ರವಾದ ಸೆಕೆ ಇರುತ್ತದೆ. ಮಳೆಗಾಲದಲ್ಲಿ ಮಳೆ ಬಂದರೆ ಆಶ್ಚರ್ಯವಿಲ್ಲ. ಮಗಳಿಗೆ ಕಂಕಣ ಭಾಗ್ಯ. ಹೆಂಡತಿಗೆ ವರನ ದರ್ಶನ, ಮಳೆ ಬಂದರೆ ನೀರಾವರಿ ಸುಧಾರಿಸುತ್ತದೆ. ಗುಟ್ಟಿನ ವ್ಯವಹಾರ

ವೃಥಾಕಾಲಕ್ಷೇಪ

ಯಾರೊಂದಿಗೂ ಹೇಳಬೇಡಿ ಗಂಡನಿಗೆ ಹೆಂಡತಿಯಲ್ಲಿ ಸಲುಗೆ ವಾಹನದಲ್ಲಿ ಪ್ರವಾಸ ಹೆಚ್ಚಿದಂತೆ ಅದರ ಖರ್ಚೂ ಹೆಚ್ಚುತ್ತದೆ, ಅಪಾಯವೂ ಅಷ್ಟೇ: ಉದ್ಯೋಗ ದೊರೆತರೆ ಅನುಕೂಲ.

ಮುಕ್ತಾಯ : ಸದ್ಯಕ್ಕೆ ಇಷ್ಟು ಸಾಕು, ತೃಪ್ತಿಯಾಗದವರು ಮುಂದಿನ ವರ್ಷದ 'ವರ್ಷ ಭವಿಷ್ಯ' ಕಾಯಿರಿ.

ಟಿ. ಎಲ್. ಉಮೇಶ್,
ತೆಕ್ಕೂರು, ಶೃಂಗೇರಿ ತಾ|

'ಧರ್ಮಗಳು ಮಾನವೀಯತೆ ಕಳೆದುಕೊಂಡಿವ[ೆ]

ಶೃಂಗೇರಿ: ಇಂದು ನಮ್ಮೆದುರಿಗಿರುವ ಎಲ್ಲಾ ಧರ್ಮಗಳೂ ಮಾನವೀಯ ಗುಣಗಳನ್ನು, ಕಳಕಳಿಯನ್ನು ಕಳೆದುಕೊಂಡಿವೆ. ಎಲ್ಲವೂ ಮನುಷ್ಯ-ಮನುಷ್ಯರನ್ನು ಬೇರ್ಪಡಿಸುವ ಗೋಡೆಗಳಾಗಿ, ಮನುಷ್ಯರನ್ನು ಸಂಕುಚಿತ ಭಾವನೆಯೊಳಗೆ ಬಂಧಿಸಿಡುವ ಉಕ್ಕಿನ ಕೋಟೆಗಳಾಗಿ ಮಾರ್ಪಟ್ಟಿವೆ ಆದ್ದರಿಂದ ಕಾರ್ಮಿಕರು, ದುಡಿಯುವ ಎಲ್ಲ ಜನರು ತಾವು ಆ ಧರ್ಮ-ಈ ಧರ್ಮಕ್ಕೆ ಸೇರಿದ್ದೇವೆಂದುಕೊಳ್ಳುವುದನ್ನು ಬಿಟ್ಟು, "ನಾವೆಲ್ಲರೂ ಮನುಷ್ಯ ಧರ್ಮಕ್ಕೆ ಸೇರಿದವರು" ಎಂಬ ವಿಶಾಲ ಭಾವನೆಯನ್ನು ಬೆಳೆಸಿಕೊಂಡು ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು ಎಂದು ಕಾಲೇಜು ಉಪನ್ಯಾಸಕ ಕೆ. ಪುಟ್ಟಯ್ಯ ಇಲ್ಲಿ ಕಾರ್ಮಿಕರಿಗೆ ಕರೆ ಕೊಟ್ಟರು.

ಇಲ್ಲಿನ ವಾಹನ ಚಾಲಕರ ಸಂಘ ಮೇ 1 ರಂದು ಕಾರ್ಮಿಕ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಸಭೆಯ ಅಧ್ಯಕ್ಷ[ತೆ] ವಹಿಸಿದ್ದ ಪುಟ್ಟಯ್ಯ ಹಾಗೂ ಶಾರದಾ[...] ಹಯವದನ ಉಪಾಧ್ಯ ಇವರುಗಳು ಧರ್ಮ ಮತ್ತು ಜಾತಿ ವ್ಯವಸ್ಥೆಯ ಕುರಿತು ಮ[ನ] ಮುಟ್ಟುವಂತೆ ವಿವರಿಸಿದರು. ಮೇ 1 ಕಾರ್ಮಿಕ ದಿನಾಚರಣೆಯ ಮಹತ್ವ ಮತ್ತು ಕಾರ್ಮಿಕರ ಜಾಗೃತಿ ಕುರಿ[ತು] ಮಾತನಾಡಿದ ಕಲ್ಕುಳಿ ವಿಠಲ ಹೆ[ಗ್ಡೆ] "ಮನುಷ್ಯರ ನಡುವಿನ ಜಾತಿ-ವರ್ಗಗಳಂಥ ಭೇದ ಭಾವಗಳನ್ನು ದೇವ[ರು] ಸೃಷ್ಟಿಸಿದ್ದ" ಎಂಬ ಜನ ವಿರೋಧಿ ತ[ತ್ತ್ವ]ವನ್ನು ಈ ಸಮಾನತೆಯ ಯುಗದಲ್ಲಿ ಪ್ರತಿಪಾದಿಸುವ ಶೃಂಗೇರಿ ಮಠದಂಥ[ವು] ಕಾರ್ಮಿಕರಿಂದಲೂ ಸಹ 'ಭೋಪರಾಕ್' ಹೇಳಿಸಿಕೊಳ್ಳಲು ಕಾರ್ಮಿಕ ವರ್ಗ ಅ[ವ]ಕಾಶ ಕೊಡಬಾರದೆಂದು ಎಚ್ಚರಿಸಿದರು.

ಸಂಘದ ಸದಸ್ಯ ಗಣೇಶ್ ವಂದಿಸಿದರು. (ವರದಿ : ಜಿ. ಆರ್. ಶಿವಪ್ಪ, ಕಾರ್ಯದರ್ಶಿ

ಶೃಂಗೇರಿ ಮಠದ ನೂತನ ಸೇತುವೆ ಹಿನ್ನೆಲೆಯಲ್ಲಿ....

● ಕಲ್ಕುಳಿ ವಿಠಲ ಹೆಗ್ಡೆ

ಮೊನ್ನೆ ಶೃಂಗೇರಿಯಲ್ಲಿ ವೀರೇಂದ್ರ ಪಾಟೀಲರು ಉದ್ಘಾಟನೆ ಮಾಡಿದ ಮಠದ ಬಳಿಯ ಸೇತುವೆಗೆ ಹಿಂದಿನ ಮುಖ್ಯಮಂತ್ರಿ ಹೆಗಡೆ ಶಂಕು ಸ್ಥಾಪನೆ ಮಾಡಿದ್ದರು. ಈ ಸೇತುವೆ ದೇಶದಲ್ಲೇ ಒಂದು ವಿಶಿಷ್ಟ ಮಾದರಿಯದಂತೆ. ಆದರೆ ಇಂಥದೊಂದು (ಸಮಸ್ತ ಜನರ ಹೆಮ್ಮೆಯದ್ದೆನ್ನಿಸಬಹುದಾಗಿದ್ದ) ಸೇತುವೆಯ ಹಿಂದೆ ಎಂಥ ಜನವಿರೋಧಿ ಕೃತ್ಯ ನಡೆದಿದೆ ಎಂಬುದನ್ನು ಬಹಳಷ್ಟು ಜನ ಮರೆಯಬೇಕು.

ಏಕೆಂದರೆ 1987ರ ಫೆಬ್ರವರಿ 12ರಂದು ಹೆಗಡೆ ಶಂಕು ಸ್ಥಾಪನೆ ಮಾಡಿ "ಈ ಸೇತು ಈ ಭಾಗದ ಹಳ್ಳಿಗಳವರಿಗೆ ಉಪಯೋಗವಾಗಲಿ" ಎಂದಿದ್ದರು 22.2.87ರ ನಮ್ಮ ಪತ್ರಿಕೆಯಲ್ಲಿ ಈ ಕುರಿತು "ಜನಸಾಮಾನ್ಯ ಮತ ಮಾನ್ಯಗಳೂ" ಎಂಬ ನನ್ನ ದೀರ್ಘ ವರದಿಯಲ್ಲಿ, ಶೃಂಗೇರಿ ರೂಪುಗೊಂಡಾಗಿನಷ್ಟು ಅನಾದಿ ಕಾಲದಿಂದಲೂ ಇದ್ದ ಹಳ್ಳಿಗಾಡಿನ ಅತ್ಯಂತ ಉಪಯುಕ್ತ ರಸ್ತೆ ಈ ಸೇತುವೆಯಿಂದ ಮುಚ್ಚಿ ಹೋಗುವ ಹುನ್ನಾರವನ್ನು ತಿಳಿಸಿ, ಈ ಸೇತುವೆಯಾದರೂ ಈ ಭಾಗದ ಹಳ್ಳಿಗಳ ಸಾರ್ವಜನಿಕರ ಓಡಾಟಕ್ಕೆ ಮುಕ್ತವಾಗಿ ದೊರೆಯುವ ಸಂದೇಹವನ್ನೂ ವ್ಯಕ್ತಪಡಿಸಿದ್ದೆ. ಆ ಸಂದರ್ಭದಲ್ಲಿ ಸಂಧಾನಕ್ಕಾಗಿ ನನ್ನಲ್ಲಿಯೂ ಬಂದಿದ್ದ ಮಠದ ಅಂದಿನ ಆಡಳಿತಾಧಿಕಾರಿ ಗಿರಿಧರ ಶಾಸ್ತ್ರಿಯವರು, ಒಂದು ವೇಳೆ ರಸ್ತೆ ಮುಚ್ಚಬೇಕಾದಲ್ಲಿ ಊರಿನ ಜನರಿಗೆ ಸೇತುವೆಯ ಮೇಲೆ ಮುಕ್ತ ಅವಕಾಶ ನೀಡುವುದಾಗಿ ಒಪ್ಪಿಕೊಂಡಿದ್ದರು.

ಆದರೆ ಮೊನ್ನೆಯ ಉದ್ಘಾಟನಾ ಸಮಾರಂಭದಲ್ಲಿ ಇದು ಹಳ್ಳಿಗರ ಉಪಯೋಗಕ್ಕೆ ಎಂಬ ಮಾತು ವೀರೇಂದ್ರ ಪಾಟೀಲರ ಬಾಯಿಯಿಂದ ಬರಲಿಲ್ಲ. "ಆಸ್ತಿಕರಿಗೆ" ಎಂದು ಮಾತ್ರ ಹೇಳಿದರು. ಭಾರತೀ ತೀರ್ಥ ಸ್ವಾಮಿ ಕೂಡ 'ಆಸ್ತಿಕರಿಗೆ' ಎಂಬುದನ್ನು ಒತ್ತಿ ಹೇಳಿದರು ಸ್ಥಳೀಯ 'ಶೃಂಕೊನ' ಪತ್ರಿಕೆಯಲ್ಲಿ 'ದೇವರ ಅಸ್ತಿತ್ವವನ್ನು ಅಲ್ಲಗಳೆಯುವವರಿಗೆ ಸೇತುವೆಯಲ್ಲಿ ಪ್ರವೇಶವಿಲ್ಲ' ಎಂಬರ್ಥದಲ್ಲಿ, ಪೂರ್ವಾಗ್ರಹ ಇಟ್ಟುಕೊಂಡು ವರದಿ ಮಾಡಲಾಗಿದೆ. ಇವುಗಳನ್ನೆಲ್ಲ ಕಂಡು ಇವರುಗಳ ಗೂಂಡಾ ಪ್ರವೃತ್ತಿಯನ್ನು (ಹೌದು, ಇದು 'ಧಾರ್ಮಿಕ' ಗೂಂಡಾ ಪ್ರವೃತ್ತಿಯೇ ತಾನೆ ?) ಬೆಳಕಿಗೆ ತರುವುದು ಈ ವರದಿಯ ಉದ್ದೇಶ.

ವೈಕುಂಠಪುರ–ತೆಕ್ಕೂರು ಕಡೆಯ ಆರೇಳು ಗ್ರಾಮಗಳ ಸಾವಿರಾರು ಜನರು ಅನಾದಿ ಕಾಲದಿಂದ ಬೇಸಿಗೆಯಲ್ಲಿ ಶೃಂಗೇರಿಗೆ ಮುಖ್ಯ ಸಂಪರ್ಕ ರಸ್ತೆಯನ್ನಾಗಿ ಬಳಸುತ್ತಿದ್ದ 'ಕಾಗೆ ಹಿಂಡ್ಲು ರಸ್ತೆ' ಈಗಿನ ನರಸಿಂಹವನದ ಮಧ್ಯೆ (ಈಗಿನ ಸೇತುವೆಯ ಕೆಳಗಿನಿಂದಾಗಿ) ಹಾದು ಹೋಗಿತ್ತು. ಮುಂಚೆ ನರಸಿಂಹವನಕ್ಕೆ ಬರುವವರೆಲ್ಲ ಅದರಲ್ಲೇ ಓಡಾಡುತ್ತಿದ್ದರು. ಅದು ಸ್ವಲ್ಪ ಏರು ರಸ್ತೆ. ಅದಕ್ಕೆ ಮಠದವರು ಅವರ ಜಮೀನಿನ ಇನ್ನೊಂದು ಮಗ್ಗುಲಲ್ಲಿ ಟಾರು ಹಾಕಿಸಿ ಒಳ್ಳೆಯ ಅಂದರೆ ಈಗ ಅವರಿಟ್ಟುಕೊಂಡಿರುವ ರಸ್ತೆ ಮಾಡಿಸಿಕೊಂಡರು. ನಂತರ ಹಳ್ಳಿಗರು ಜನರ ಮತ್ತು ಗಾಡಿಗಳ ತಿರುಗಾಟ ಹಳೆಯ ರಸ್ತೆಯಲ್ಲೇ ಮುಂದುವರಿದಿತ್ತು.

ಅಷ್ಟು ಹೊತ್ತಿಗೆ ಈ ಸೇತುವೆ ಮಾಡುವ ಉದ್ದೇಶ (ಹಿಂದಿನ) ಗುರುಗಳಿಗೆ ಬಂದು, ಅದಕ್ಕೆ ಸರ್ಕಾರದ ಅನುಮತಿ ಬೇಕಾಗಿತ್ತು. ಅದೇ ಹೊತ್ತಿಗೆ ಮಠದ ಮೇಸ್ತ್ರಿಯೊಬ್ಬನಿಗೆ ಬೇಲಿಯ ಗಂಡಿಗಳನ್ನು ಕಟ್ಟುವ ಕೆಲಸ ಕಷ್ಟವಾಗಿ ಕಂಡು, ಅದೇ ಹಳೆಯಲ್ಲಿ ಈ ರಸ್ತೆಯನ್ನೇ ಮುಚ್ಚಿದರೆ 2 ಎಕ್ರೆ–ಚಿಲ್ಲರೆ ಜಾಗವೂ ಸಿಗುತ್ತದೆ ಎಂದು ಗುರುಗಳ 'ಕಿವಿ ಕಚ್ಚಿದನಂತೆ'. ಮಠದವರ ಆಸೆಗೆ ತಕ್ಕಂತೆ ಕುಣಿಯುವುದಕ್ಕೆ ತಯಾರಾಗಿದ್ದ ಆಗಿನ ತಹಸೀಲ್ದಾರ್ ಪ್ರಭಾಕರ ಶರ್ಮ ಇದಕ್ಕಾಗಿ ಕಡತಗಳನ್ನೆಲ್ಲ ಯಾರಿಗೂ ತಿಳಿಯದಂತೆ ತಯಾರು ಮಾಡಿಟ್ಟರು. ಆದರೂ ಈ ಬಗ್ಗೆ ಸಾಕಷ್ಟು ಗುಲ್ಲು ಎದ್ದು, ಸ್ಥಳೀಯರೆಲ್ಲ ಆ ರಸ್ತೆಯನ್ನು ಉಳಿಸಿಕೊಳ್ಳಬೇಕೆಂದು ಕೋರಿ ಅಧಿಕಾರಿಗಳಿಗೆ ದೂರು ಕೊಟ್ಟರು.

ಆದರೂ ಸರ್ಕಾರ 86–87ರ ಗೆಜೆಟ್ ನೋಟಿಫಿಕೇಶನ್‌ನಲ್ಲಿ "ಈ ರಸ್ತೆ ಸಾರ್ವಜನಿಕರಿಗೆ ಅನುಪಯುಕ್ತವೆಂದು ಕಂಡು ಬಂದಿದೆ. ಈ ರಸ್ತೆಯ ಅವಶ್ಯಕತೆ ಮತ್ತು ಹಕ್ಕು ಇರುವವರು ನಿಗದಿತ ದಿನಾಂಕದೊಳಗೆ ಬರೆದು ತಿಳಿಸುವಂತೆ" ತಿಳಿಸಲಾಗಿತ್ತು. ಅದನ್ನು ತಹಸೀಲ್ದಾರ್ ಶರ್ಮ ಸೂಚನಾ ಫಲಕಕ್ಕೆ ಹಾಕದೆ ಮುಚ್ಚಿಟ್ಟುಬಿಟ್ಟಿದ್ದರು. ಆದರೆ ನಮ್ಮ ಶಿವಮೊಗ್ಗದ ಗೆಳೆಯರೊಬ್ಬರು "ನಿಮ್ಮೂರಿನ ಯಾವುದೋ ರಸ್ತೆಯ ವಿಚಾರ 2 ವಾರದ ಕೆಳಗೆ ಗೆಜೆಟ್‌ನಲ್ಲಿ ಬಂದಿತ್ತು ನೋಡಿ" ಎಂದು ತಿಳಿಸಿದಾಗ ಕೂಡಲೇ ತಹಸೀಲ್ದಾರರನ್ನು ಕೇಳಿದ್ದಕ್ಕೆ, ಇಂದಷ್ಟೇ ಬಂದಿದೆಯೆಂದು ಹೇಳಿ ಫಲಕಕ್ಕೆ ಹಾಕಿದರು.

ಅದಕ್ಕೆ 100 ಕ್ಕೂ ಹೆಚ್ಚು ಜನ ಸಾಮೂಹಿಕ ಅರ್ಜಿ ಹಾಕಿದ್ದರಲ್ಲಿ, ಕೆಲವರ ವಿಳಾಸ ತಿಳಿಯದೆ, ಕೆಲವರಿಗೆ ನೋಟೀಸು ಸಕಾಲದಲ್ಲಿ ತಲುಪದೆ, 57 ಜನ ತಮ್ಮ ವಾದವನ್ನು ತಹಸೀಲ್ದಾರ್‌ರಲ್ಲಿ ಹೇಳಿಕೊಂಡರು. ಅದರಲ್ಲಿ ತೀರಾ ತೊಂದರೆ ಆಗುತ್ತಿದ್ದ ಇಬ್ಬರಿಗೆ ಆಮಿಷ ತೋರಿಸಿ, ಅವರಿಗೆ ಸ್ವಲ್ಪ ಅನುಕೂಲವಾಗುವಂತೆ ಬದಲಾವಣೆ ಮಾಡಿ, ಅವರ ಒಪ್ಪಿಗೆಯನ್ನು ಪಡೆದರು. ಆದರೆ ನಮ್ಮ 55 ಜನರ ಆಕ್ಷೇಪಣೆಯನ್ನು 'ದುರುದ್ದೇಶದ್ದು' ಎಂದು ತೀರ್ಮಾನಿಸಿ ಆ ಜಾಗ ಮತ್ತು ರಸ್ತೆಯನ್ನು ಮಠದವರಿಗೆ ಬಿಟ್ಟುಕೊಟ್ಟರು. ಈಗ ಆ ಭಾಗದ ಹಳ್ಳಿಗಳ ಜನ ಪೇಟೆಯ ಸಂಪರ್ಕಕ್ಕಾಗಿ 3–4 ಕಿ. ಮೀ. ಸುತ್ತಿಕೊಂಡು ಬರಬೇಕಾಗಿದೆ.

ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಬಿ. ಪಾರ್ಥಸಾರಥಿ ಮಠದವರಿಂದ ಪಡೆದಿದ್ದ 10 ಸಾವಿರ ರೂ. ಗಳ ಬಗ್ಗೆ ಅವರ ಸ್ಪಷ್ಟನೆ ಕೇಳಿ ನಾನು ಪತ್ರ ಬರೆದ ನಂತರ, ಜಿಲ್ಲಾ ಕ್ರೀಡಾಂಗಣದ ರಶೀದಿಯನ್ನು ಮಠಕ್ಕೆ ಕಳಿಸಿಕೊಟ್ಟರು.

ಅಂತೂ ಈಗ ಮಠದವರು ತಮ್ಮ ಖಾಸಗಿ ಸೊತ್ತು ಎಂದು ಸಾರುತ್ತಿರುವ ಈ ಸೇತುವೆ ಈ ಭಾಗದ ಹಳ್ಳಿಗಳ ಅನಾದಿ

(6ನೇ ಪುಟಕ್ಕೆ)

ಕೊಪ್ಪದಲ್ಲಿ ಹೆಚ್ಚಿರುವ ಬಾಗಿಲು-ಕಿಟಕಿ ಕಳ್ಳತನಗಳು

ಕೊಪ್ಪ : ಇಲ್ಲಿನ ಕೆಲವು ಬಡಾವಣೆಗಳಲ್ಲಿ ಹೊಸದಾಗಿ ಕಟ್ಟುತ್ತಿರುವ ಮನೆಗಳಿಂದ ಕಿಟಕಿ–ಬಾಗಿಲು ಮುಂತಾದುವನ್ನು ಕಿತ್ತು ಕಳವು ಮಾಡುವುದು ಹೆಚ್ಚಾಗಿರುವ ದೂರುಗಳು ಬಂದಿವೆ.

ಈಚೆಗೆ ಇಂದಿರಾ ನಗರದ ಬಳಿ ಇದೇ ಕಸುಬಿನವರೆನ್ನಲಾದ ಶೀನ ಮತ್ತು ಅಂತೋಣಿ ಎಂಬವರು ರಾಜು ಎಂಬವರ ಮನೆಯ ಬಾಗಿಲನ್ನು ಇದೇ ರೀತಿ ಕೀಳಲು ಯತ್ನಿಸುತ್ತಿದ್ದಾಗ, ಅಲ್ಲಿ ಕಾವಲಿದ್ದ ರಾಜು ಮತ್ತು ಅವರ ಸ್ನೇಹಿತನ ಕೈಗೆ ಇವರಿಬ್ಬರೂ ಸಿಕ್ಕಿಬಿದ್ದು ತಪ್ಪಿಸಿಕೊಂಡಿದ್ದಾರೆನ್ನಲಾಗಿದೆ.

ಅನಂತರ ಶಂಕರ್ ಕಂಪೆನಿ ಕಾರ್ಮಿಕ ಸಂಘದ ಕಾರ್ಯದರ್ಶಿ ಎಚ್. ಆರ್. ಸಂಜೀವ ಇದೇ ಪ್ರದೇಶದಲ್ಲಿ ಕಟ್ಟಿಸುತ್ತಿರುವ ಮನೆಯ ಬಾಗಿಲು ಕಳುವಾಗಿದ್ದು, ಅವರು ಈ ಇಬ್ಬರ ಮೇಲೆ ಗುಮಾನಿ ವ್ಯಕ್ತಪಡಿಸಿ ಪೋಲೀಸಿಗೆ ದೂರು ನೀಡಲಾಗಿ, ಪೋಲೀಸರು ಶೀನನನ್ನು ಕರೆಸಿ ವಿಚಾರಣೆ ನಡೆಸುತ್ತಿದ್ದಾಗ ಒಂದು ಕುತೂಹಲದ ಪ್ರಸಂಗ ನಡೆದಿದೆ.

ಕಂಟ್ರಾಕ್ಟರ್ ಮತ್ತು ಕಾಂಗ್ರೆಸ್ ಕಾರ್ಯಕರ್ತನೆಂದುಕೊಂಡು ಸ್ಕೂಟರಿನಲ್ಲಿ ಸದಾ ಕಾಲ 50-60 ಕಿ. ಮಿ. ವೇಗದಲ್ಲೇ ಓಡಾಡುವ ಅಬ್ದುಲ್ಲಾ ಎಂಬ ಯುವಕ ಠಾಣೆಗೆ ಧಾವಿಸಿ, ಆರೋಪಿಗಳ ಪರ ವಹಿಸಿ ಪೋಲೀಸರೆದುರು ಸಂಜೀವ ಅವರಿಗೆ ರೋಪು ಹಾಕಿ ತನ್ನ ಬಣ್ಣ ಬಯಲು ಮಾಡಿಕೊಂಡಿದ್ದಾನೆ. ಈ ಕಳ್ಳ ಮಾಲುಗಳನ್ನು ಕೊಳ್ಳುವ 'ಗಿರಾಕಿ'ಗಳಲ್ಲಿ ಈತನೂ ಒಬ್ಬ ಪ್ರಮುಖ ಕಂಟ್ರಾಕ್ಟರನೆಂಬ ಮಾತು ವ್ಯಾಪಕವಾಗಿ ಕೇಳಿಬರುತ್ತಿದೆ.

ಇದೇ ರೀತಿಯ ಸಣ್ಣ ಪುಟ್ಟ ಕಳ್ಳತನಗಳು ಹೆಚ್ಚುತ್ತಿದ್ದು ಪೋಲೀಸರು ಪತ್ತೆ ಕ್ರಮಗಳನ್ನು ಹೆಚ್ಚು ಚುರುಕುಗೊಳಿಸಬೇಕೆಂಬ ಒತ್ತಾಯ ಎಲ್ಲೆಡೆ ನಾಗರಿಕರಿಂದ ಕೇಳಿ ಬರುತ್ತಿದೆ.

ನಾಲ್ಕು ಚಕ್ರ-ಒಂದೇ ಕಣ್ಣು !

ಜೀಪು ಕಾರು, ಲಾರಿ, ಮೆಟಡೋರ್ ಮುಂತಾದ 4 ಚಕ್ರದ ವಾಹನಗಳವರು ತಮ್ಮ ಬಲಭಾಗದ ಲೈಟನ್ನು ಆರಿಸಿಕೊಂಡು, ಒಂದೇ ಲೈಟಿನಲ್ಲಿ ಓಡಾಡಿಸುತ್ತಿರುವುದು ಕಳೆದ ಒಂದೆರಡು ವರ್ಷಗಳಿಂದಲೂ ಹೆಚ್ಚಾಗಿದೆ.

ಇಂಥ ವಾಹನ ಸ್ಕೂಟರ್, ಮೋಟಾರ್ ಸೈಕಲ್ ಮುಂತಾದ ದ್ವಿ ಚಕ್ರಿಗಳಿಗೆ ಎದುರಾಗಿ ಸಿಕ್ಕರೆ, ಅದು ನಾಲ್ಕು ಚಕ್ರದ ವಾಹನನೆಂದು ಗೊತ್ತಾಗುವುದೇ ಇಲ್ಲ ದ್ವಿಚಕ್ರಿಯೆಂದುಕೊಂಡು ಅದಕ್ಕೆ ಡಿಕ್ಕಿ ಹೊಡೆಯುವ ಸಂದರ್ಭ ತೀರಾ ಜಾಸ್ತಿ. ಆ ವಾಹನದ ಎಡಗಡೆಯ ದೀಪ ಆರಿಸಿದ್ದರಾದರೂ ಅಷ್ಟು ಅಪಾಯವಿಲ್ಲ. ಆದರೆ ಹೆಚ್ಚಾಗಿ ಬಲಗಡೆಯದೇ ಆರಿಸಿರುತ್ತಾರೆ.

ಈ ರೀತಿ ಅಪಘಾತವಾಗುವುದು ಕೂದಲೆಳೆಯಷ್ಟರಲ್ಲಿ ತಪ್ಪಿದರೂ ಬೈಕಿನವರು ತೀರಾ ತೊಂದರೆ ಪಡಬೇಕಾದ ಹಲವು ಪ್ರಸಂಗಗಳು ಜರುಗಿವೆ. ಈ ಬಗ್ಗೆ ಪೋಲೀಸರಿಗೆ ದೂರು ನೀಡಿದ್ದಕ್ಕೆ ಅವರು ವಿಚಾರಿಸಿದರೆ ಬಲ್ಬ್ 'ಬರ್ನ್' ಆಗಿದೆ ಎಂದೇನಾದರೂ ನೆಪ ಹೇಳುತ್ತಾರೆಂದು ಪೋಲೀಸರು ಕೈ ಚೆಲ್ಲುತ್ತಾರೆ.

ಇಂಥ ದುಷ್ಟ ಪ್ರವೃತ್ತಿ ರೂಢಿಸಿಕೊಂಡಿರುವ ವಾಹನಗಳವರು ತೀವ್ರ ಅಪಘಾತಗಳು ಸಂಭವಿಸುವ ಮೊದಲೇ ಸ್ವಲ್ಪ ತಿದ್ದಿಕೊಳ್ಳುವರೆಂದು ಆಶಿಸಬಹುದೆ?

ಎಸ್ಸೆಸ್ಸೆಲ್ಸಿ, ಪಿಯುಸಿ ಫಲಿತಾಂಶಗಳು

ಬಸರಿಕಟ್ಟೆ

ಸದ್ಗುರು ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ತೆಗೆದುಕೊಂಡಿದ್ದ 70 ಮಂದಿಯಲ್ಲಿ 61 ಮಂದಿ ತೇರ್ಗಡೆಯಾಗಿದ್ದಾರೆ. (ಶೇ. 88 6) ಇದರಲ್ಲಿ 19 ಪ್ರಥಮ ಶ್ರೇಣಿ, 30 ಮಂದಿ ದ್ವಿತೀಯ ಶ್ರೇಣಿ ಪಡೆದಿದ್ದಾರೆ

ಹರಿಹರಪುರ

ಆ. ರಾ. ಸ. ಪ್ರೌಢ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ 85ಕ್ಕೆ 59 ಮಂದಿ ತೇರ್ಗಡೆ (ಶೇ. 57.9). 10 ಮಂದಿ ಪ್ರಥಮ ಮತ್ತು 22 ಮಂದಿ ದ್ವಿತೀಯ ಶ್ರೇಣಿ ಗಳಿಸಿದ್ದಾರೆ. (ವರದಿ : ಅನಿಲ)

ಕಮ್ಮರಡಿ-2ನೇ ಪಿಯುಸಿ

ಕಮ್ಮರಡಿ ಸರ್ಕಾರಿ ಕಿರಿಯ ಕಾಲೇಜಿಗೆ 2ನೇ ಪಿಯುಸಿಯಲ್ಲಿ 43.9 ಫಲಿತಾಂಶ. 114ರಲ್ಲಿ 50 ಮಂದಿ ಉತ್ತೀರ್ಣರಾಗಿ, 6 ಜನ ಮೊದಲ ಶ್ರೇಣಿ ಪಡೆದಿದ್ದಾರೆ.

ಎಸ್ಸೆಸ್ಸೆಲ್ಸಿಯಲ್ಲಿ ಡಿ. ಆನಂದ ಎಂಬ ವಿದ್ಯಾರ್ಥಿ 600ಕ್ಕೆ 543 ಅಂಕ ಗಳಿಸಿದ್ದರೂ ಆತನಿಗೆ ರ್‍ಯಾಂಕ್ ಘೋಷಿಸದಿರುವ ಬಗ್ಗೆ ವಿಚಾರಣೆ ಆಗಬೇಕೆಂದು ಪ್ರಿನ್ಸಿಪಾಲ್ ತಿಳಿಸಿದ್ದಾರೆ.

ಶೃಂಗೇರಿ

ಇಲ್ಲಿನ ವಿದ್ಯಾತೀರ್ಥ ಬಾಲಿಕಾ ಪ್ರೌಢ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕುಳಿತಿದ್ದ 81 ರಲ್ಲಿ 78 ವಿದ್ಯಾರ್ಥಿನಿಯರು ತೇರ್ಗಡೆಯಾಗಿ ಶೇ. 96 ಫಲಿತಾಂಶ ದೊರೆತಿದೆ. 28 ಮಂದಿ ಮೊದಲ ಶ್ರೇಣಿ ಪಡೆದಿದ್ದಾರೆ.

ಕಹಿ ಕಹಿ 'ರಸ್ನಾ' !

ಹೊಸದಿಲ್ಲಿ : ಕೃತಕವಾಗಿ ಲಿಂಬೆ ಮತ್ತು ಕಿತ್ತಳೆ ಹಣ್ಣಿನ ಪರಿಮಳ ಹಾಗೂ ರುಚಿ ಉಂಟುಮಾಡುವ ಬ್ರೊಮಿನೇಟೆಡ್ ವೆಜಿಟೆಬಲ್ ಆಯಿಲ್ (ಬಿವಿಓ) ಬಳಸಿ ತಯಾರಿಸಲಾಗುತ್ತಿರುವ ಲಿಂಬೆ–ಕಿತ್ತಳೆ ಸ್ವಾದದ 6 ಕೃತಕ ತಂಪು ಪಾನೀಯಗಳ ತಯಾರಿಕೆಯನ್ನು ಜೂನ್ 6ರವರೆಗೆ ನಿಷೇಧಿಸಲಾಗಿದೆ.

ಉತ್ಪಾದನೆ ಮತ್ತು ಮಾರಾಟ ವ್ಯವಸ್ಥೆಯಲ್ಲಿನ ಅಕ್ರಮ ವಂಚನೆಗಳನ್ನು ನಿಯಂತ್ರಿಸಲಿಕ್ಕಾಗಿ ಇರುವ 'ಮೊನೋಪಲೀಸ್ ಅಂಡ್ ರೆಸ್ಟ್ರಿಕ್ಟಿವ್ ಟ್ರೇಡ್ ಪ್ರಾಕ್ಟೀಸಸ್ ಕಮಿಶನ್' (ಎಂ ಆರ್. ಟಿ.ಪಿ.ಸಿ.) ಈ ಆದೇಶವನ್ನು ಮೇ 10 ರಂದು ನೀಡಿದೆ.

ಹೀಗೆ ಬಹಿಷ್ಕೃತವಾದ ಪಾನೀಯಗಳಲ್ಲಿ ಭಾರೀ ಜಾಹೀರಾತು ಖ್ಯಾತಿಯ ರಸ್ನಾ ಕೂಡ ಸೇರಿದೆ. ಟ್ರಿಪ್, ರಕ್ಷಾ, ಕ್ಯಾಂಪಾ ಆರೆಂಜ್ ಹಾಗೂ ಪ್ಯೂರ್ ಡ್ರಿಂಕ್ಸ್, ಮೆಕ್‌ಡೊವೆಲ್ ಮತ್ತು ಪಯೊಮಾ ಇಂಡಸ್ಟ್ರೀಸ್ ಸಂಸ್ಥೆಗಳ ಉತ್ಪನ್ನಗಳು ಬಹಿಷ್ಕರಿಸಲ್ಪಟ್ಟ ಇತರ 'ತಂಪು ಪೇಯ'ಗಳಾಗಿವೆ.

ಜಿಲ್ಲೆಯಲ್ಲಿ ಪ್ರಮುಖ ವರ್ಗಾವರ್ಗಿಗಳು

ಚಿಕ್ಕಮಗಳೂರು: ಜಿಲ್ಲಾಧಿಕಾರಿಗಳಾಗಿದ್ದ ವಿ. ಉಮೇಶ್ ಮೈಸೂರಿಗೆ ವರ್ಗವಾಗಿ, ಡಾ॥ ಸುಬ್ರಮಣ್ಯಂ ನೂತನ ಜಿಲ್ಲಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಜಿ ಪ. ಮುಖ್ಯ ಕಾರ್ಯದರ್ಶಿ ಚಂದ್ರಹಾಸ ಗುಪ್ತರ ಸ್ಥಾನಕ್ಕೆ ಟಿ. ವೈ ನಯಾಜ್ ಅಹಮದ್ ನೇಮಕವಾಗಿದ್ದಾರೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯಾಗಿ ಮೋಹನ್ ಎಂಬವರ ನೇಮಕವಾಗಿದೆ. ಎಸ್ಪಿ ಓಂಪ್ರಕಾಶ್‌ಗೆ ಶಿವಮೊಗ್ಗಕ್ಕೆ ವರ್ಗವಾಗಿ,ಅವರ ಸ್ಥಾನಕ್ಕೆ ಹಾಸನದಲ್ಲಿ ಎಸ್ಪಿ ಆಗಿದ್ದ ಕೆ. ಎಸ್. ಎನ್. ಚಿಕ್ಕೆರೂರ್ ನೇಮಕವಾಗಿದ್ದಾರೆ.

ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಕೇ... ವಾನಂದ ಅವರಿಗೆ ಸಿರ್ಸಿಗೆ ವರ್ಗವಾಗಿದ್ದು, ಸಿಓಡಿಯಿಂದ ಎಸ್. ಎಂ ಪಾಶಾ ಎಂ... ವರು ಕೊಪ್ಪಕ್ಕೆ ಬರಲಿದ್ದಾರೆ.

ಸಬ್‌ಇನ್‌ಸ್ಪೆಕ್ಟರ್‌ಗಳು

ಹರಿಹರಪುರ ಠಾಣಾಧಿಕಾರಿ ಟಿ ಆರ್. ಮಂಜುನಾಥಯ್ಯ ಅವರನ್ನು ನ ರಾ.ಪು... ಕ್ಕೆ, ಅಲ್ಲಿಂದ ಮರೀಗೌಡರನ್ನು ಶೃಂಗೇರಿಗೂ ವರ್ಗಾಯಿಸಿದ್ದು, ಶೃಂಗೇರಿಯಲ್ಲಿ... ಜೆ ಪಾಪಯ್ಯ ವಿಟ್ಲಕ್ಕೆ ವರ್ಗವಾಗಿದ್ದಾರೆ. ಹರಿಹರಪುರಕ್ಕೆ ಬೆಂಗಳೂರು ಸ್ಪೆಷಲ್ ಬ್ರಾಂಚ್‌ನಿಂದ ನಾರಾಯಣಾಚಾರ್ ನೇ... ಮಕಗೊಂಡಿದ್ದಾರೆ. ಕಳಸದ ವಿವಾದಗ್ರಸ್ತ ಎಸ್ ಐ ಹನುಮಂತಪ್ಪ ಸುಬ್ರಮಣ್ಯ... ವರ್ಗವಾಗಿದ್ದಾರೆ

ಕೊಪ್ಪ ಅರಣ್ಯ ವಿಭಾಗದಲ್ಲೂ ಹ... ವಾರು ವರ್ಗಾವರ್ಗಿಗಳಾಗಿದ್ದು. ವಲಯ ಅರಣ್ಯಾಧಿಕಾರಿಗಳಾದ ಕೊಪ್ಪದ ಶ್ರೀ... ವಾಸರಾವ್ ನ.ರಾ ಪುರದ ಜವರೇಗೌ... ಮತ್ತು ಬಾಳೆಹೊನ್ನೂರಿನ ಧರ್ಮಪಾ... ವರ್ಗಾವಣೆ ಹೊಂದಿದ್ದಾರೆ.

ನೂತನ ಸೇತುವೆಯ ಹಿನ್ನೆಲೆಯಲ್ಲಿ

(5ನೇ ಪುಟದಿಂದ)

ಕಾಲದ ಸಂಪರ್ಕ ರಸ್ತೆಯ ಗೋರಿಯ ಮೇಲೆ ತೂಗಿ ನಿಂತಿದೆ ಅದರಲ್ಲಿ ಸಾರ್ವಜನಿಕರಿಗೆ ಮುಕ್ತ ಸಂಚಾರಕ್ಕೆ ಅವಕಾಶ ನೀಡುವುದಾಗಿ ಮಾತು ಕೊಟ್ಟಿದ್ದ ಗಿರಿಧರ ಶಾಸ್ತ್ರಿಯವರ ಮಾತು ಈಗ ಮಠದಲ್ಲಿ ನಡೆಯದೇ ಅವರೇ ಮಠದಿಂದ ಹೊರ ನಡೆಯುವ ಕಾಲ ಬಂದಿದೆ.

ಊರಿನವರ ಮನ ನೋಯಿಸಿ. ಅವರನ್ನು ನಾವು ಎದುರು ಹಾಕಿಕೊಳ್ಳುವುದು ಬೇಡ; ಈ ಸೇತುವೆಯಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿರಲಿ ಎಂಬ ಮನೋಭಾವ ಹೊಂದಿದ್ದ ಆಗಿನ ಗುರುಗಳೂ ಈಗ ಇಲ್ಲ. ಈಗಿರುವವರು 'ಆಸ್ತಿಕರಿಗೆ ಮಾತ್ರ' ಎಂಬ ಮಾತಾಡುತ್ತಾರೆ ಸೇತುವೆಯ ಮೇಲಿಂದ ಓಡಾಡುವವರಲ್ಲಿ ಆಸ್ತಿಕರು–ನಾಸ್ತಿಕರು ಎಂದು ಹೇಗೆ ಪತ್ತೆ ಹಚ್ಚುತ್ತಾರೋ ! ತಿಳಿಯದು.

ಸ್ವಾಮಿಗಳು ಇನ್ನೂ ಒಂದು ಮಾತು ಹೇಳಿದರು—'ಈ ಹಿಂದೆ ದೋಣಿ ದಾಟುವಾಗ ಕೆಲವು ಜನ ಮುಳುಗಿ ಪ್ರಾಣ ಕಳೆದುಕೊಂಡ ಚರಿತ್ರೆ ಪುನರಾವರ್ತನೆಯಾಗಬಾರದು' ಎಂದು. ಅದೇ ದೊಡ್ಡ ಮನಸ್ಸು ನಿಜವಾಗಿಯೂ ಇದ್ದರೆ, ಈ ಸೇತುವೆಯನ್ನು ಹಳ್ಳಿಗರಿಗೆ 'ನಿಷಿದ್ಧ' ಮಾಡಿದಲ್ಲಿ ಅವರುಗಳು 2 ಕಡೆ ದೋಣಿ ದಾಟಬೇಕಾಗುವ ಪರಿಸ್ಥಿತಿ ಉಂಟಾಗುವುದಲ್ಲ. ಅದನ್ನಾದರೂ ತಪ್ಪಿಸಲಿ.

ಮನೆಗಣತಿ ಕುರಿತು ಸಾರ್ವಜನಿಕರಿಗೆ ಸೂಚನೆ

ಕೊಪ್ಪ : 1991 ರ ಜನಗಣತಿಯ ಮೊದಲ ಹಂತವಾಗಿ ಮನೆಗಳ ಗಣ... ಮೇ 22ರವರೆಗೆ ನಡೆದಿದ್ದು, ಈ ಅವಧಿಯಲ್ಲಿ ಎಣಿಕೆದಾರರು ಯಾವುದೇ ಮನೆ... ಭೇಟಿ ನೀಡಿ ವಿವರ ಸಂಗ್ರಹಿಸದೇ ಇ... ಅಥವಾ ಮನೆಗೆ ಕ್ರಮ ಸಂಖ್ಯೆ ನೀಡದೆ ಇದ್ದಲ್ಲಿ ಅಂಥವರು ತಹಸೀಲ್ದಾರ್‌ರವರನ್ನು ಸಂಪರ್ಕಿಸಲು ಜಿಲ್ಲಾಧಿಕಾರಿಗಳು ಕೋರಿದ್ದಾರೆ

ಮರಗಳ ತೋಪಿನಲ್ಲಿ ಗ್ರಾಮ ಸಭೆ

ಕಮ್ಮರಡಿ : ಜನತಾ ಸರ್ಕಾರದ ಗ್ರಾಮ ರಾಜ್ಯದ ಜಾಹೀರಾತಿನ ದೊಡ್ಡ ದೊಡ್ಡ ಬೋರ್ಡುಗಳನ್ನು ನೋಡಿದ್ದೀವಲ್ಲ? ಒಂದು ದೊಡ್ಡ, ವಿಶಾಲವಾದ ಮರದಡಿಯ ಕಟ್ಟೆಯ ಮೇಲೆ ಗ್ರಾಮ ಸಭೆ ನಡೆಯುತ್ತಿದೆ. ಕಟ್ಟೆಯ ಮೇಲೆ–ಕೆಳಗೆ, ಸುತ್ತಮುತ್ತ ಹಳ್ಳಿಗರು ಕುಳಿತಿದ್ದಾರೆ ಮುಂಡು–ಮುಂಡಾಸು, ಮೊಣಕಾಲಿನವರೆಗೆ ಮಾತ್ರವಿರುವ ಗಿಡ್ಡ ಪಂಚೆ, ಅರೆಮೈ. ಧೋತ್ರ–ಹೀಗೆ ನಾನಾ ರೀತಿಯ ಸಹಜ ಉಡುಗೆಗಳು, ಗಡ್ಡ–ಗಿರಿಜಾ ಮೀಸೆಗಳು ಗಿರಕಿ ಚಪ್ಪಲಿ–ಬರಿಗಾಲುಗಳು—ಅಪ್ಪಟ ಹಳ್ಳಿಯ ವಾತಾವರಣ. ಶಾಂತಿ – ನೆಮ್ಮದಿ–ಸೌಹಾರ್ದಗಳಿಂದ ಮನಸ್ಸು ತುಂಬಿ ಬರುವಂಥ, ಗಾಂಧೀ ಕನಸಿನ ರಾಮರಾಜ್ಯವನ್ನು ನೆನಪಿಸುವಂಥ ಚಿತ್ರ. ಅಲ್ಲವೆ?

ಚಾವಲ್ಮನೆ ಮಂಡಲದ ಹೊನಗಾರು, ಮಕ್ಕಿಕೊಪ್ಪ, ದೇವರಹಳ್ಳಿ ಗ್ರಾಮಗಳ ಗ್ರಾಮ ಸಭೆ ಮೊನ್ನೆ ಮೇ 16 ರಂದು ನಡೆದದ್ದು ಹೀಗೇ. ದೇವರಹಳ್ಳಿಯ 'ಬೋಳುಗುಡ್ಡ ವನ' ಎಂಬ ತೋಪಿನಲ್ಲಿ ಚಾಪೆಗಳನ್ನು ಹಾಸಿಕೊಂಡು ಗ್ರಾಮ ಸಭೆ ನಡೆಯಿತು. ಮಂಡಲ ಸದಸ್ಯ ಯು. ಎಸ್. ಶಿವಪ್ಪನವರ ಅಧ್ಯಕ್ಷತೆ. ಸಭೆಯ ನಂತರ ಗ್ರಾಮಸ್ಥರಿಗೆಲ್ಲ ಏರ್ಪಡಿಸಿದ್ದ ಸರಳವಾದ ಊಟ ನೆಮ್ಮದಿಯ ವನಭೋಜನವಾಯಿತು.

ತಮ್ಮ ಮಗಳ ಮದುವೆಯ ಗಡಿಬಿಡಿಯ ಕಾರಣ ಪ್ರಧಾನ ಕುಸುರಿಗೆ ಕೃಷ್ಣಪ್ಪ ಸಭೆಗೆ ಗೈರು ಹಾಜರಾದುದೊಂದು ಮಾತ್ರ ಗ್ರಾಮಸ್ಥರಿಗೆ ಅಸಮಾಧಾನ ಮೂಡಿಸಿತು.

'ಶುಭ ಆಶಯ'

ದಿನಾಂಕ. 21-5-90 ರಂದು ಶೃಂಗೇರಿಯಲ್ಲಿ ಸರಳ ವಿವಾಹ ಮಾಡಿಕೊಂಡ ಶ್ರೀಮತಿ ಶೃತಿ, ಮೂಡಬಾಗಿಲು ಮತ್ತು ಶ್ರೀ ಬೇಗಾನೆ ಜಗದೀಶ್, ನ. ರಾ. ಪುರ ಇವರ ದಾಂಪತ್ಯ ಜೀವನ ಸುಂದರವಾಗಿರಲೆಂದು ಹಾರೈಸುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತು ಅತಿಶಯೋಕ್ತಿಯಾಗಲಾರದು. ವರ ಒಬ್ಬ ವಲಯ ಅರಣ್ಯಾಧಿಕಾರಿಯಾಗಿದ್ದು, ಬೇಕಾದಷ್ಟು ವರದಕ್ಷಿಣೆಯ ಕೊಡುಗೆಗಳು ಇದ್ದರೂ, ವಧುವೊಬ್ಬಳನ್ನು ಹೊರತು ಬೇರೇನನ್ನೂ ಆಸೆ ಪಡದ ಯುವಕ. ಕೆಲವರ ಹಾಗೆ ಭಾಷಣದಲ್ಲಿಯೇ ಬಡಾಯಿ ಕೊಚ್ಚದೆ, ಎಲೆಮರೆಯ ಕಾಯಿಯಂತೆ ನಿರ್ದಿಷ್ಟ ತತ್ವ, ಸರಳತೆಯನ್ನು ವಿವಾಹದಲ್ಲಿ ಪಾಲಿಸಿಕೊಂಡಿರುವಾತ.

ತೊಗಲಿನ ಬಣ್ಣವನ್ನೇ ಸೌಂದರ್ಯವೆಂದು ಭ್ರಮಿಸಿರುವ, ಆರ್ಥಿಕ ಸಂಪತ್ತೇ 'ಶ್ರೀಮಂತ ಬದುಕು' ಎಂದು ನೆಚ್ಚಿರುವ ಹಲವರು ಜಗದೀಶ್‌ರ ಸಹಜತೆಯ ಈ ತೀರ್ಮಾನವನ್ನು ಪ್ರಶ್ನಾರ್ಥಕವಾಗಿ ನೋಡಿ, "ರೇಂಜರ್ ಆದವನಿಗೆ ಇನ್ನೂ ಒಳ್ಳೆಯ ಆಫರ್ ಸಿಗುತ್ತಿತ್ತು" ಎಂದೂ ಹೇಳಿದ್ದುಂಟು ಆದರೆ, ಯಶಸ್ವೀ ಕುಟುಂಬ ಜೀವನಕ್ಕೆ ಪ್ರೀತಿಯೊಂದೇ ಮೂಲಾಧಾರ ಎಂದು ನಂಬಿರುವ ಜಗದೀಶ್, ಮಧ್ಯಮ ವರ್ಗದ ಈ ಮನೋವೃತ್ತಿಗಳಿಗೆ ಸೋಲಲಿಲ್ಲ

ಜಗದೀಶ್‌ರ ಅಣ್ಣ ಮಂಜುನಾಥ್ ಕೂಡ 20-5-90 ರಂದು ಇದೇ ರೀತಿ ಸರಳವಾಗಿ ಕುಸುರಿಗೆಯ ಪವಿತ್ರರನ್ನು ಮದುವೆಯಾದರು. ಇಂತಹ ದಿಟ್ಟ ನಿಲುವಿನ ಯುವಕರು ನಿಜಕ್ಕೂ ಪ್ರಶಂಸಾರ್ಹರು. ಅಷ್ಟೇ ಅಲ್ಲ. ಅನುಕರಣೀಯ ವ್ಯಕ್ತಿಗಳೂ ಹೌದು. ಇಂದಿನ ನಮ್ಮ ವ್ಯವಸ್ಥೆ ಸ್ವಲ್ಪವಾದರೂ ಆರೋಗ್ಯ ಪೂರ್ಣವಾಗಲು ಇಂತಹ ಯುವಕರ ಜರೂರತ್ ಬಹಳವಾಗಿದೆ

—ಶಶಿಕಲಾ ಉರಣ್ಕರ್, ನ.ರಾ.ಪುರ

ಓದುಗರ ಪುಟ

ಪ್ರಥಮ ಚಿಕಿತ್ಸೆ ಪೆಟ್ಟಿಗೆ ರಹಿತ ಬಸ್ಸುಗಳು

ಪ್ರಿಯರೆ,

ಇತ್ತೀಚೆಗೆ ಕೆಲವು ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳಲ್ಲಿ ಅತ್ಯಗತ್ಯವಾಗಿ ಇರಲೇಬೇಕಾದ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳು ಕಾಣಿಸುವುದು ಅಪರೂಪವಾಗಿದೆ. ಅದರ ಬದಲು ದೂರು ಪೆಟ್ಟಿಗೆಯನ್ನೋ ಸಲಹೆ ಪೆಟ್ಟಿಗೆಯನ್ನೋ ಇಟ್ಟಿರುತ್ತಾರೆ. ಅದರಲ್ಲಿ ನಮ್ಮ ಸಲಹೆಗಳನ್ನಾಗಲಿ ದೂರುಗಳನ್ನಾಗಲಿ ಬರೆದರೆ ಅದರಿಂದ ಸ್ವಲ್ಪವಾದರೂ ಪ್ರಯೋಜನವಾಗುತ್ತದೆಂಬ ನಂಬಿಕೆ ನನಗಿಲ್ಲ.

ಆಕಸ್ಮಾತ್ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳಿದ್ದರೂ ಅದರೊಳಗೆ ಚಿಕಿತ್ಸೆಗೆ ಬೇಕಾಗುವ ಸಾಮಗ್ರಿಗಳಿರುವುದು ಕಡಿಮೆ. ಬದಲಿಗೆ ಅದರ ಮೇಲೆ ಬ್ರೇಕ್ ಲೈಟೋ ಅಥವಾ ಇನ್ನ್ಯಾವುದೋ ಬಸ್ಸಿನ ಅಲಂಕಾರ ಸಾಧನವೋ ರಾರಾಜಿಸುತ್ತಿರುತ್ತದೆ.

ಅಪಘಾತಗಳಾದಾಗ ಇನ್ನೆಲ್ಲಿಗೋ ಓಡಬೇಕಾಗುವುದಕ್ಕಿಂತ, ಇರುವ ಪೆಟ್ಟಿಗೆಯಲ್ಲೇ ಅಗತ್ಯವಿರುವ ಎಲ್ಲಾ ಪ್ರಥಮ ಚಿಕಿತ್ಸಾ ಸಲಕರಣೆಗಳನ್ನಿಟ್ಟು ಬಳಸಿಕೊಳ್ಳುವುದು ಉತ್ತಮ.

ಈ ಬಗ್ಗೆ ಬಸ್ಸುಗಳ ಮಾಲೀಕರೂ, ಸಂಬಂಧಿಸಿದ ಅಧಿಕಾರಿಗಳೂ ಗಮನ ಹರಿಸಲಿ.

—ಬಾಣಂಕಿ ಪ್ರಕಾಶ್,
ಕುಡನಲ್ಲಿ.

ಜಯಪುರದ ರಿಕ್ಷಾ ಬಾಡಿಗೆ

ಪ್ರಿಯರೆ,

ಜಯಪುರದಲ್ಲಿರುವ ರಿಕ್ಷಾಗಳಿಗೆ ಮೀಟರು ಹೇಗೂ ಇಲ್ಲವಲ್ಲ. ಅಷ್ಟೇ ಅಲ್ಲದೆ, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಜನರಿಂದ ಬಾಡಿಗೆ ಹಣವನ್ನು ಪಡೆಯುತ್ತಾರೆ. ಇದರಿಂದ ರಿಕ್ಷಾದಲ್ಲಿ ಬಾಡಿಗೆಗೆ ಹೋಗುವ ಜನರಿಗೆ ಮೋಸವಾಗುತ್ತಿದೆ.

ಆದುದರಿಂದ ಎಲ್ಲಾ ರಿಕ್ಷಾ ಚಾಲಕರೂ ಒಂದೇ ಸಮನಾಗಿ ಬಾಡಿಗೆ ಪಡೆಯಬೇಕು. ಹಾಗೂ ಸಂಬಂಧ ಪಟ್ಟವರು ಕ್ರಮ ಕೈಗೊಂಡು ಈ ರೀತಿ ಏರ್ಪಾಡು ಮಾಡಬೇಕೆಂದು ವಿನಂತಿಸುತ್ತೇನೆ.

ನಾಗರಿಕರ ಪರವಾಗಿ,
ಡಿ. ಡಿ. ಡಿ'ಸೋಜ,
ಜಯಪುರ.

ಕೊಪ್ಪ ತಾಲ್ಲೂಕು ಕಛೇರಿಯ ಆದರ್ಶ

ಯರೆ,

ಅದೊಂದು ತಾಲ್ಲೂಕು ಕಛೇರಿ. 10 ಂಟೆಗೆ ಇನ್ನೂ ಕೆಲವು ನಿಮಿಷಗಳಿವೆ. ದರೆ ಆಗಲೇ ತಾಲೂಕು ಮುಖ್ಯಾಧಿಕಾರಿ ಹಶೀಲ್ದಾರರು ಕಛೇರಿಯಲ್ಲಿ ಕಾಗದ-ಪತ್ರ ೋಡುತ್ತಿದ್ದಾರೆ. ಅದೂ ಕೂಡ ಅವ ವಿಶಾಲವಾದ ಛೇಂಬರ್-ಕೋರ್ಟ್ ಹಾಲ್‌ನಲ್ಲಿ ಅಲ್ಲ. ಸಹಾಯಕ ಸಿಬ್ಬಂದಿ ಲಸ ಮಾಡುವ ಹಜಾರದ ಬಾಗಿಲಿಗೆ ಂದಿಕೊಂಡೇ ಒಳಗಡೆ ಅವರ ಕುರ್ಚಿ- ೇಜು.

ನಾವು ನಮ್ಮ ಕೆಲಸಕ್ಕಾಗಿ ಆ ಹಜಾರವನ್ನು ಪ್ರವೇಶಿಸುವಾಗಲೇ, ಅಲ್ಲೇ ಕುಳಿತ ತಹಶೀಲ್ದಾರ್ ನಮ್ಮ ಕೆಲಸದ ವಿವರ ಿದುಕೊಂಡು, ಸಂಬಂಧಪಟ್ಟ ಗುಮಾಸ್ತರನ್ನು ಕರೆದು ನಮ್ಮ ಕೆಲಸ ಮಾಡಿಸಿ ಡುತ್ತಾರೆ. ಅಥವಾ ನಮ್ಮ ಕೆಲಸ ಾವಾಗ ಆಗುತ್ತದೆಯೆಂಬ ಖಚಿತ ೂಚನೆ ನೀಡುತ್ತಾರೆ. ಕಛೇರಿಯ ಮುಖ್ಯ ವೇಶ ದ್ವಾರದಲ್ಲಿಯೇ "ಸಾರ್ವಜನಿಕರು ಮ್ಮ ಕೆಲಸ ಕುಂದು-ಕೊರತೆ ಬಗ್ಗೆ ನೇರ ಿ ತಹಶೀಲ್ದಾರರನ್ನು ಭೇಟಿ ಮಾಡ ಕೆಂಬ" ಸೂಚನಾ ಫಲಕ ಹಾಕ ಟ್ಟಿದೆ.

ಕೆಲವು ತಿಂಗಳ ಹಿಂದೆ ಚಿಕ್ಕಮಗಳೂರು ಿಯ ಕೊಪ್ಪ ತಾಲೂಕಿಗೆ ತಹಶೀ ಲ್ದಾರಾಗಿ ಬಂದಿರುವ ಗಿರಿಜಾ ಶಂಕರ ಯ್ಯರ್ ಎಂಬ ತರುಣ ಅಧಿಕಾರಿಯು ೇರಿಯಲ್ಲಿ ಜಡ್ಡುಗಟ್ಟಿ ಹೋಗಿರುವ ಿವಳಿ-ಭ್ರಷ್ಟಾಚಾರಗಳಿಂದ ಜನರಿಗೆ ಗುತ್ತಿರುವ ತೊಂದರೆಯನ್ನು ತಪ್ಪಿಸಲು ಾಗಿಯೇ ಕಂಡುಕೊಂಡು ಜಾರಿಗೊಳಿಸಿ ಕ್ರಮ ಇದು.

ಳೆದ 50 ವರ್ಷದಿಂದ ಸರ್ಕಾರಿ ಕಛೇರಿ ತಿಂಗಳಿಗೆ ಒಂದೆರಡು ಸಲ ಹೋಗಿ ನಾನು ಕೊಪ್ಪ ತಾಲೂಕು ಕಛೇರಿಯ ಈ ವಿನೂತನ ಕ್ರಮ ಒಂದು ಆದರ್ಶವಾಗಿದ್ದು, ಕಛೇರಿಗಳಿಗೆ ಎಡತಾಕುವ ಶ್ರೀಸಾಮಾನ್ಯರ ಬವಣೆಯನ್ನು ಕೆಲ ಮಟ್ಟಿಗಾದರೂ ಕಡಿಮೆ ಮಾಡಿದೆಯೆಂಬುದನ್ನು ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಜನರ ಬಗ್ಗೆ ನಿಜವಾದ ಕಳಕಳಿಯುಳ್ಳ ಇಂತಹ ಅಧಿಕಾರಿಯನ್ನು ನೋಡಿ ಸಮಾಧಾನವೆನಿಸುತ್ತಿದೆ ಇಂತಹ ವಿಷಯಗಳಿಗೆ ಎಲ್ಲ ರೀತಿಯ ಪ್ರೋತ್ಸಾಹ, ವ್ಯಾಪಕ ಪ್ರಚಾರ ದೊರೆಯಬೇಕು. ಇದು ಒಬ್ಬ ತಹಶೀಲ್ದಾರರ ವೈಯಕ್ತಿಕ ವಿಧಾನ

(4ನೇ ಪುಟಕ್ಕೆ)

ಇರುವ ಸೌಕರ್ಯಗಳೇ ಅಪವ್ಯಯವಾಗುತ್ತಿರುವ ಕೊಪ್ಪ ಸ|| ಆಸ್ಪತ್ರೆ

ಪ್ರಿಯರೆ,

ಕಳೆದ ವಾರದ 'ಮುಂಜಾವು' ಪತ್ರಿಕೆಯಲ್ಲಿ ಅಶೋಕರಾವ್ ಅವರು ಕೊಪ್ಪ ಸರ್ಕಾರಿ ಆಸ್ಪತ್ರೆಯ ಅನೇಕ ಅವಶ್ಯಕತೆಗಳನ್ನು ತಿಳಿಸಿದ್ದಾರೆ. ಅದಕ್ಕೆ ಮುಂಚೆ, ಈಗ ಇರುವ ಎಷ್ಟೋ ಸೌಕರ್ಯಗಳೇ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಸಾರ್ವಜನಿಕರೂ ಸಾಕಷ್ಟು ಬೇಜವಾಬ್ದಾರಿತನ ತೋರಿಸುತ್ತಾರೆ.

ಕಳೆದ ಭಾನುವಾರ (20-5-90) ನಾನು ನನ್ನ ಸಂಬಂಧಿಕ ರೋಗಿಯೊಬ್ಬರನ್ನು ನೋಡಲು ಈ ಆಸ್ಪತ್ರೆಗೆ ಹೋದಾಗ ನನಗಾದ ಕೆಲವು ಅನುಭವಗಳನ್ನು ಇಲ್ಲಿ ತಿಳಿಸುತ್ತಿದ್ದೇನೆ. ಕೆಲವು ವಾರ್ಡ್‌ಗಳಲ್ಲಿ ಸಿಂಕ್‌ಗಳಲ್ಲಿ ಕಸ ಸಿಕ್ಕಿ ನೀರೆಲ್ಲಾ ತುಂಬಿ ದುರ್ನಾತವಾಗಿದೆ ಫ್ಯಾನ್ ಇದೆ. ಆದರೆ ಕೆಲವು ಸಿಕ್ಕಾಪಟ್ಟೆ ತಿರುಗುತ್ತವೆ ಇನ್ನು ಕೆಲವು ತಿರುವುದೇ ಇಲ್ಲ. ಬಚ್ಚಲು, ಪಾಯಿಖಾನೆಗಳ ಬಾಗಿಲು ತೆಗೆದಾಗ ಒಳಗೆ ಹೋಗುವ ಮುಂಚೆಯೇ ವಾಂತಿ ಮಾಡಿಕೊಳ್ಳುವಂತಾಗುತ್ತದೆ.

ಪಕ್ಕದ ವಾರ್ಡ್‌ನಲ್ಲಿ ಗಲಾಟೆ ಏನೆಂದು ನೋಡಿದಾಗ ಒಂದು ನಾಯಿ ಹಾಸಿಗೆಯ ಮೇಲೆ ನಿರ್ಭಿಡೆಯಿಂದ ಆರಾಮವಾಗಿ ಮಲಗಿತ್ತು. ಆದರೆ ಆ ವಾರ್ಡು ಖಾಲಿ ಇದ್ದುದರಿಂದ ಯಾರಿಗೇನೂ ತೊಂದರೆಯಾಗಲಿಲ್ಲ. ನಮ್ಮ ವಾರ್ಡಿನ ಕಪಾಟಿನಿಂದ ಬೆಕ್ಕೊಂದು ಹೊರಗೆ ಬಂತು. ಕೆಲವು ಬಾರಿ ಬೆಕ್ಕು-ನಾಯಿಗಳು ವಾರ್ಡಿನಲ್ಲಿರುವ ಕಂದಮ್ಮಗಳ ಸುತ್ತ ತಿರುಗುತ್ತಿರುತ್ತವೆಂದು ಅಲ್ಲಿಯವರು ತಿಳಿಸಿದರು. ತಾಯಂದಿರಿಗೆ ನಿದ್ದೆ ಬಂದಾಗ ಅವುಗಳೇನಾದರೂ ಹಸುಗೂಸನ್ನು ಕಚ್ಚಿಕೊಂಡು ಹೋದರೆ?.... ಯೋಚಿಸಿದರೇ ಮೈ ನಡುಗುತ್ತದೆ.

ಜಿರಲೆ-ತಿಗಣೆ-ಹಲ್ಲಿಗಳು ಸರ್ವೇಸಾಮಾನ್ಯವಾಗಿವೆ. ಇನ್ನು, ಮಳೆ ಬಂದರೆ ಮಾತ್ರ ವಾರ್ಡಿನೊಳಗೆ ನೀರು ಬರುತ್ತದೆ ಅದರ ಅನುಭವವೂ ಆಗಲೇ ಆಯಿತು.

ಆಸ್ಪತ್ರೆಯ ಪಕ್ಕದಲ್ಲೇ ನೆಲಮಟ್ಟದಲ್ಲಿ ನೀರಿನ ಟ್ಯಾಂಕಿ ಇದ್ದು 'ಕೋಟಿತೀರ್ಥ' ವೆಂದು ಖ್ಯಾತಿಯಾಗಿದೆ ! ಇದರ ಮೇಲೆ ನಿಂತುಕೊಂಡು ಕಾಲು ತೊಳೆಯುವುದು, ಮುಖ ತೊಳೆಯುವುದು, ಹಲ್ಲು ತಿಕ್ಕಿ ಉಗುಳುವುದು, ಪಾತ್ರೆ ತೊಳೆಯುವುದು, ಇತ್ಯಾದಿಗಳಿಗೆ ಬಹೂಪಯೋಗಿಯಾಗಿದ್ದು,

(4ನೇ ಪುಟಕ್ಕೆ)

ಅತಿಭೇದಿ ರೋಗದಿಂದ ಬಳಲುತ್ತಿರುವಾಗ ಗಮನಿಸಬೇಕಾದ ಕೆಲ ಮಹತ್ವದ ಅಂಶಗಳು

(ದಿನಕ್ಕೆ ಮೂರು ಅಥವಾ ಅದಕ್ಕೂ ಹೆಚ್ಚು ಬಾರಿ ನೀರಾಗಿ ಭೇದಿ ಮಾಡಿಕೊಳ್ಳುವ ವ್ಯಕ್ತಿಯನ್ನು ಅತಿಭೇದಿ ರೋಗದಿಂದ ಬಳಲುತ್ತಿರುವ ರೋಗಿ ಎಂದು ತಿಳಿಯಬೇಕು.)

1. ಅತಿಭೇದಿ ರೋಗ ಪ್ರಾರಂಭವಾದಾಗಿನಿಂದಲೇ ಹಾಲು, ನೀರು, ಹಣ್ಣಿನ ರಸ, ಎಳನೀರು, ಮಜ್ಜಿಗೆ, ಶರಬತ್ ಮೊದಲಾದ ದ್ರವ ಪದಾರ್ಥಗಳನ್ನು ರೋಗಿಗೆ ಕುಡಿಯಲು ಕೊಡಬೇಕು (ಅಥವಾ ಕುಡಿಸಬೇಕು). ಉಪ್ಪು-ಸಕ್ಕರೆ ದ್ರಾವಣ ಸರ್ಕಾರಿ ಆಸ್ಪತ್ರೆ ಸಿಬ್ಬಂದಿಯವರಲ್ಲಿ ಪುಕ್ಕಟೆಯಾಗಿ ದೊರೆಯುತ್ತದೆ.
2. ವಾಂತಿಯಾಗುತ್ತಿದ್ದರೂ ಸಹ ಈ ದ್ರವ ಪದಾರ್ಥಗಳನ್ನು ರೋಗಿ ಸಂಪೂರ್ಣ ಗುಣವಾಗುವವರೆಗೆ ಆಗಾಗ್ಗೆ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಕುಡಿಸುತ್ತಿರಬೇಕು.
3. ಎದೆಹಾಲನ್ನು ಕುಡಿಯುವ ಮಗುವಾದರೆ ಎದೆಹಾಲು ಕುಡಿಸುವುದನ್ನು ಮುಂದುವರಿಸಬೇಕು.
4. ರೋಗಿಗಳು ಎಂದಿನಂತೆಯೇ ಆಹಾರವನ್ನು ಸೇವಿಸಬೇಕು, ರೋಗಿಯನ್ನು ಉಪವಾಸವಿಡಬಾರದು.
5. ಮಗುವಿಗೆ ಮೇಲಿನ ಹಾಲನ್ನು ಕುಡಿಸುತ್ತಿದ್ದರೆ, ಬಾಟಲಿ ಬದಲು ಬಟ್ಟಲು, ಚಮಚ ಬಳಸುವುದು ಉತ್ತಮ.
6. ಸ್ವಚ್ಛತೆಯನ್ನು ಯಾವಾಗಲೂ ಕಾಪಾಡಿಕೊಳ್ಳಬೇಕು.
7. ಮನೆಯಲ್ಲಿಯೇ ಜೀವಜಲ ತಯಾರಿಸುವುದು ಸುಲಭ.

ಕೊಪ್ಪ ಆಸ್ಪತ್ರೆ : ಸೌಕರ್ಯಗಳ ಅಪವ್ಯಯ

(3ನೇ ಪುಟದಿಂದ)

ಹೀಗೆ ಉಪಯೋಗಿಸಿದ ನೀರು ದಂಡ ವಾಗದೆ ವಾಪಸ್ ಅದಕ್ಕೇ ಹರಿಯುವುದೇ ಇಲ್ಲಿಯ ವೈಶಿಷ್ಟ್ಯ! ಇದನ್ನು ನೋಡಿಯೇ ನಂಬಬೇಕು. ಕೆಲವು ಬಾರಿ ಕುಡಿಯುವುದಕ್ಕೂ ಈ ನೀರನ್ನೇ ಉಪಯೋಗಿಸಬೇಕಾಗುವುದುಂಟಂತೆ. ಕೊಪ್ಪದಲ್ಲಿ ಸರಬರಾಜಾಗುವುದೇ ಖಾಸಗಿ ವೈದ್ಯರ ಪ್ರಾಕ್ಟೀಸ್ ಹೆಚ್ಚಿಸುವ ಬ್ರ್ಯಾಂಡಿನ "ತಾಜಾ" (ಹೊಳೆ-ಕೆರೆಯಿಂದ ಸೋಸದೆ ಸೀದಾ ಬಿಟ್ಟ) ನೀರು. ಅದು ಇಲ್ಲಿ ಇನ್ನಷ್ಟು 'ಸಮೃದ್ಧ' (enriched) ಆಗುತ್ತದೆ ಎನ್ನಬಹುದೆ?

ಈಗಾಗಲೇ ಇರುವ ಸೌಕರ್ಯಗಳೇ ವ್ಯವಸ್ಥಿತವಾಗಿ ಬಳಕೆಯಾಗದೆ ಪೋಲಾಗುತ್ತಿರುವಾಗ ಇನ್ನೂ ಸೌಲಭ್ಯಗಳು ಜಾಸ್ತಿಯಾಗಿ ಅಧ್ವಾನ ಆಗುವುದಕ್ಕಿಂತಲೂ, ಮೊದಲಿಗೆ ಈಗ ಇರುವ ವ್ಯವಸ್ಥೆಯನ್ನೇ ಸಾರ್ವಜನಿಕರೂ ಆಸ್ಪತ್ರೆಯ ಸಿಬ್ಬಂದಿಗಳೂ ಜವಾಬ್ದಾರಿಯಿಂದ ಬಳಸುವಂತೆ ಸಂಬಂಧಪಟ್ಟ ಎಲ್ಲರೂ (ಅಧಿಕಾರಿಗಳು, ಪುರಸಭೆಯವರು, ಸಂಪರ್ಕ ಸಮಿತಿಯವರು ಇತ್ಯಾದಿ) ಗಮನಹರಿಸಲಾರರೆ?

—ವಸಂತ್‌ಕುಮಾರ್ ಹರ್ಡೀಕರ್ ಹಾಗೂ ಇತರರು, ಕೊಪ್ಪ.

ಸಹ್ಯಾದ್ರಿ ಪಾಲಿಟೆಕ್ನಿಕ್ ತೀರ್ಥಹಳ್ಳಿ

ಪ್ರಕಟಣೆ

ಈ ಮೇಲ್ಕಂಡ ಸಂಸ್ಥೆಯ ವತಿಯಿಂದ 1989-90ನೇ ಸಾಲಿನ ಪ್ರಥ[ಮ] ವರ್ಷದ ಸಿವಿಲ್, ಇಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಡಿಪ್ಲೋಮಾ ತರಗತಿಗಳ[ಿಗೆ] ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ : ಪ್ರವೇಶ ಬಯಸುವ ಅಭ್ಯರ್ಥಿಗಳು ಎಸ್ ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಶೇಕಡ 45 ಅಂಕಗಳನ್ನು ಗಳಿಸಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು (ಎಸ್‌ಸಿ ಮತ್ತು ಎಸ್ ಟಿ) ಹಾಗೂ ಗ್ರೂಪ್-ಎ ಅಭ್ಯರ್ಥಿಗಳು ಕನಿಷ್ಠ ಶೇಕಡ 35 ಅಂಕಗಳನ್ನು ಗಳಿಸಿರಬೇಕು. ಅಲ್ಲದೆ ಗ್ರೂಪ್-ಬಿ ಗ್ರೂಪ್-ಸಿ, ಗ್ರೂಪ್-ಡಿ, ಗ್ರೂಪ್-ಇ ಮತ್ತು ಗ್ರಾಮೀಣ ಅಭ್ಯರ್ಥಿಗಳು ಕನಿಷ್ಠ ಶೇಕಡ 40 ಅಂಕಗಳನ್ನು ಗಳಿಸಿರಬೇಕು 1981ರ ಜನಗಣತಿಯ ಪ್ರಕಾ[ರ] 20,000 ಅಥವಾ ಕಡಿಮೆ ಜನಸಂಖ್ಯೆಯುಳ್ಳ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಎಂಟು (8) ವರ್ಷಗಳವರೆಗೆ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳನ್ನು ಗ್ರಾಮೀಣ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದ್ದು, ಗ್ರಾಮೀಣ ಗುಂಪಿನಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು ಕರ್ನಾಟಕದಲ್ಲಿ ಮಾನ್ಯತೆ ಪಡೆದ ಶಿಕ್ಷಣಾಲಯದಿಂದ ಪಡೆದ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರವೇಶವನ್ನು ಪಡೆಯಬಹುದು.

ಕರ್ನಾಟಕದವರಾಗಿರದ ಇತರ ರಾಜ್ಯಗಳ ಅಭ್ಯರ್ಥಿಗಳು ಪ್ರವೇಶ ಪಡೆಯು[ವ] ಮೊದಲು 'ಡೈರೆಕ್ಟರ್ ಆಫ್ ಟೆಕ್ನಿಕಲ್ ಇಡುಕೇಷನ್' ಇವರಿಂದ ಪಡೆದ ಅರ್ಹತಾ ಸರ್ಟಿಫಿಕೇಟನ್ನು ಹಾಜರುಪಡಿಸಬೇಕು.

ಅರ್ಜಿ ಫಾರಂಗಳನ್ನು ರೂ. 25-00 ಶುಲ್ಕ ನೀಡಿ ಸಹ್ಯಾದ್ರಿ ಪಾಲಿಟೆಕ್ನಿಕ್ ಕಛೇರಿ, ವನಶ್ರೀ ಬಿಲ್ಡಿಂಗ್ ಕೊಪ್ಪ ರಸ್ತೆ, ತೀರ್ಥಹಳ್ಳಿ ಇಲ್ಲಿ ಪಡೆಯಬಹುದು

ಹೆಚ್ಚಿನ ವಿವರಗಳು ಬೇಕಾದಲ್ಲಿ ಪ್ರಿನ್ಸಿಪಾಲ್‌ರವರನ್ನು ಸಹ್ಯಾದ್ರಿ ಪಾಲಿಟೆಕ್ನಿಕ್ ವನಶ್ರೀ ಬಿಲ್ಡಿಂಗ್, ತೀರ್ಥಹಳ್ಳಿ ಇಲ್ಲಿ ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 10-6-1990.

(ಸಹಿ) ಪ್ರಿನ್ಸಿಪಾಲ್
ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ.

(ಸಹಿ) ಎಂ. ಆರ್. ಧರ್ಮಯ್ಯ ಗೌ[ಡ]
ಮ್ಯಾನೇಜಿಂಗ್ ಡೈರೆಕ್ಟರ್.

ತಾಲ್ಲೂಕು ಕಚೇರಿಯ ಆದರ್ಶ

(3ನೇ ಪುಟದಿಂದ)

ಮಾತ್ರವಾಗಿ, ಅವರು ವರ್ಗವಾದಾಗ ಅವರ ಹಿಂದೆಯೇ ಹೋಯಿತು ಎಂಬಂತಾಗಬಾರದು. ಇಂತಹ ಉತ್ತಮ ವಿಧಾನಗಳು ಸರ್ಕಾರದ ಖಾಯಂ ನೀತಿಯೆನಿಸಿ ಎಲ್ಲ ಕಛೇರಿಗಳಲ್ಲಿಯೂ ಅಳವಡಿಸಲ್ಪಡಬೇಕು

ಇದು ಇನ್ನಷ್ಟು ಪರಿಣಾಮಕಾರಿಯಾಗಲು ಜನರ ಆಸಕ್ತಿ, ಸಹಕಾರ ಅತ್ಯಗತ್ಯ. ನಾವು ನಿಯಮಕ್ಕೆ ವ್ಯತಿರಿಕ್ತವಾಗಿ ಹೊರಗಿನ ದಲ್ಲಾಳಿಯ ಮೂಲಕ ಸಂಬಂಧಪಟ್ಟ ಗುಮಾಸ್ತೆಯೊಡನೆ ವ್ಯಾಪಾರ ಕುದುರಿಸಿಕೊಂಡು ಎಲ್ಲರೂ ಸೇರಿ ಸರ್ಕಾರದ ಆದಾಯಕ್ಕೆ ಮೋಸ ಮಾಡುವ ದುಷ್ಪ್ರವೃತ್ತಿ ಮೊದಲು ತಪ್ಪಬೇಕು.

—ಹರಿಹರಪುರ ಬಿ. ಸುಬ್ರಮಣ್ಯಂ,
ಬೆಂಗಳೂರು.

ರಿಯಾಯಿತಿ ದರದಲ್ಲಿ ಕೃಷಿ ಉಪಕರಣಗಳು

ಶೃಂಗೇರಿ : ವಿಶೇಷ ಅಕ್ಕಿ ಉತ್ಪಾದನೆ ಯೋಜನೆಯಡಿ ಕಬ್ಬಿಣದ ನೇಗಿಲು, ಹಾರೆ, ಕುಡುಗೋಲು, ಪಿಕಾಸಿಗಳನ್ನು ಅರ್ಧ ಬೆಲೆಯಲ್ಲಿ ಎಲ್ಲ ರೈತರು ಪ್ರಯೋಜನ ಪಡೆದುಕೊಳ್ಳಬಹುದು. ಪಿಕಾಸಿಗಳು ಹೊಸದಾಗಿ ಬಂದಿವೆಯೆಂದು ಪ್ರಕಟಣೆ ತಿಳಿಸಿದೆ.

ಅಡಿಕೆ ಧಾರಣೆ

ಶಿವಮೊಗ್ಗ : 24-5-1990
ಸರಕು : 4260-4629
ಬೆಟ್ಟೆ : 3280-3689
ಗೊರಬಲು : 2079-2480

ಸಾಗರ
24-5-1990
ಇಡಿ : 3039-3789
ಆಪಿ : 4290-4487

ಕೊಪ್ಪ ಅರಣ್ಯ ವಿಭಾಗ

ಸಂಖ್ಯೆ/ಬಿ 1ಅತ ಹರಾಜು ಸಿಆರ್. 8/90-91 ತಾ| 3-5-90

ಅರಣ್ಯ ತಕ್ಷೀರ್‌ನಲ್ಲಿ ಮುಟ್ಟುಗೋಲು ಹಾಕಿಕೊಂಡ ಮರಮಟ್ಟುಗಳ ಹಾಗೂ ಉಪಯೋಗಿಸಲು ಬಾರದಂಥ ಹತಾರಗಳ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕೊಪ್ಪ ವಿಭಾಗದ ಈ ಕೆಳಕಂಡ ಅರಣ್ಯ ವಲಯ ಅರಣ್ಯ ತಕ್ಷೀರ್‌ನಲ್ಲಿ ಮುಟ್ಟುಗೋಲು ಹಾಕಿಕೊಂಡ (FOC Materials) ಹಾಗೂ ಉಪಯೋಗಿಸಲು ಬಾರದಂತಹ ಹತಾರಗಳನ್ನು (Unserviceable articles) ಈ ಕೆಳಗೆ ಹೆಸರಿಸಿದ ದಿನಾಂಕಗಳಂದು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿಯುಳ್ಳವರು ಹರಾಜಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ಅಥವಾ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಕ್ರ.ಸಂ.	ವಲಯದ ಹೆಸರು ಮತ್ತು ಹರಾಜಿನ ಸ್ಥಳ	ಹರಾಜಿಗೆ ಇಟ್ಟಿರುವ ವಸ್ತುಗಳ ವಿವರ	ಹರಾಜಿನ ದಿನಾಂ[ಕ]
1)	ಬಾಳೆಹೊನ್ನೂರು ವಲಯ ರೇಂಜ್ ಆಫೀಸ್ ಕಾಂಪೌಂಡ್	1) ಅರಣ್ಯ ತಕ್ಷೀರ್‌ನಲ್ಲಿ ಮುಟ್ಟುಗೋಲು ಹಾಕಿಕೊಂಡ ಮರಮಟ್ಟುಗಳು. 2) ಉಪಯೋಗಿಸಲು ಬಾರದಂತಹ ಹತಾರಗಳು	ತಾ|| 28-5-90 ಬೆಳಗ್ಗೆ 9-00 ಗಂಟೆ
2)	ಚಿಕ್ಕ ಅಗ್ರಹಾರ ವಲಯ (ಸರ್ಕಾರಿ ನಾಟಾ ಡಿಪೋ ನ. ರಾ. ಪುರ)	—"—	ತಾ| 28-5-90 ಬೆಳಗ್ಗೆ 11-00 ಗಂ[ಟೆ]
3)	ನ.ರಾ. ಪುರ ವಲಯ (ರೇಂಜ್ ಆಫೀಸ್ ಕಾಂಪೌಂಡ್)	1) ಅರಣ್ಯ ತಕ್ಷೀರ್‌ನಲ್ಲಿ ಮುಟ್ಟುಗೋಲು ಹಾಕಿಕೊಂಡ ಮರಮಟ್ಟುಗಳು ಹಾಗೂ ಬಿದಿರಿನ ಕಡ್ಡಿಗಳು, ಉಪಯೋಗಿಸಲು ಬಾರದ ಹತ್ಯಾರಗಳು.	ತಾ| 28-5-90 ಬೆಳಗ್ಗೆ 12-00 ಗಂ[ಟೆ]
4)	ಕೊಪ್ಪ ವಲಯ ವಿಶ್ರಾಂತಿ ಗೃಹದ ಹತ್ತಿರ	1) ಅರಣ್ಯ ತಕ್ಷೀರಿನಲ್ಲಿ ಮುಟ್ಟುಗೋಲು ಹಾಕಿಕೊಂಡ ಮರಮಟ್ಟುಗಳು 2) ಉಪಯೋಗಿಸಲು ಬಾರದಂತಹ ಹತ್ಯಾರಗಳು	ತಾ| 28-5-90 ಮಧ್ಯಾಹ್ನ 3-00
5)	ಶೃಂಗೇರಿ ವಲಯ (ರೇಂಜ್ ಆಫೀಸ್ ಕಾಂಪೌಂಡ್)	—"—	ತಾ| 28-5-90 ಮಧ್ಯಾಹ್ನ 5-[00]

ಷರತ್ತುಗಳು

1) ಹರಾಜಿಗೆ ಮುನ್ನ ಇ.ಎಂ.ಡಿ.ಯಾಗಿ ರೂ. 500-00 ಪಾವತಿಸಬೇಕು.
2) ಹರಾಜು ಮುಗಿದ ಕೂಡಲೇ ಖರೀದಿಸಿದ ಮಾಲಿನ 1/4 ಭಾಗ ಹಣ ಮತ್ತು ಇತರೆ ಪೂರ್ಣ ತೆರಿಗೆಗಳನ್ನು ಹರಾ[ಜಿನ] ದಿನವೇ ಪಾವತಿಸತಕ್ಕದ್ದು.

(ಸಹಿ) ಕಿಷನ್‌ಸಿಂಗ್ ಸಂಗಾರ್,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ